ಹಿತ್ತಲ ಗಿಡ

"ತಳಮಟ್ಟದ ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವತ್ತ ಕೈ ಜೋಡಿಸೋಣ"

ಚಾತುರ್ಮಾಸಿಕ

ಪೈರು 15, ಕೊಯಿಲು 3, ಸೆಪ್ಟಂಬರ್ - ಡಿಸೆಂಬರ್, 2009

ಮಹತ್ವದ ರೈತ ತೀರ್ಪು











NIF ಪುರಸ್ಕೃತ ಕನ್ನಡಿಗರು

ಈ ಸಂಚಿಕೆಯಲ್ಲಿ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ಪಾರಂಪರಿಕ ಆಹಾರ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹನಿಬೀ ಬಳಗ

Honey Bee (*English*)
Prof. Anil K.Gupta, Indian Institute of Management,
Vastrapur, Ahmedabad - 380 015, Ph: 079-26307241
email: anilg@nifindia.org, honeybee@sristi.org

Ama Akha Pakha (*Oriya*)
Dr. Balaram Sahu, 3R BP 5/2, BP Colony, Unit-8,
Bhubaneswar - 751 012, Orissa, balaram_sahu@hotmail.com

Loksarvani (*Gujarati*)
Dilip Koradiya, SRISTI P.O.Box 15050
Ahmedabad, Gujarat - 380015, loksarvani@sristi.org

Makhir (*Pahari*)
Dr.A.Chandan, ERA, Khundian, District Kangra,
Himachal Pradesh - 176030, makhir@epatra.com

Num Vali Velanmai (*Tamil*)
P. Vivekanandan, 45, TPM Nagar, Virattipathu
Tamil Nadu - 625 010, numvali@vsnl.com

Sujh-Bujh Aas Paas Ki (*Hindi*)
Shalini Sharma, H-12 ODS Flats Lajpat Nagar 4
New Delhi - 110024, sujhbuj@sristi.org

Palle Srujana (*Telugu*)
Brig. (Retd.) P.Ganesham,
55, Vayupuri, Secunderabad - 500 094. (A.P.)
Ph. : 040-27118555
honeybeeap@gmail.com
and

Hittalagida (*Kannada*)

ಹಿತ್ತಲ ಗಿಡದ ಪೋಷಣೆಗೆ ಸಹಾಯ:
PRITVI (People Rewarding Initiatives in Technology, Values & Institutions), Bangalore, **SRISTI** (Society for Research and Initiatives for Sustainable Technologies and Institutions), & **NIF** (National Innovation Foundation, India), Ahmedabad

ಸಂಪಾದಕೀಯ

ಹೈದರಾಬಾದಿನ "ಡೆಕ್ಕನ್ ಡೆವಲಪ್‌ಮೆಂಟ್ ಸಂಸ್ಥೆಯ" ನಮ್ಮ ಮಿತ್ರ ಪಿ.ವಿ.ಸತೀಶ್ ನೇತೃತ್ವದಲ್ಲಿ ಜರುಗಿದ ಅತ್ಯಂತ ಮಹತ್ವದ **"ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣ"** ಪ್ರಕ್ರಿಯೆಯ ಮೂಲಕ ಹೊರಬಂದಿರುವ **"ರೈತ ತೀರ್ಪು"** ನಮ್ಮ ಮುಂದಿದೆ. ಕಳೆದ ಡಿಸೆಂಬರ್ ಮೊದಲವಾರ ನಾಲ್ಕು ದಿನಗಳ ಕಾಲ ಜರುಗಿದ ಈ ಕಾರ್ಯಕ್ರಮವನ್ನು ಸತೀಶ್ ಮತ್ತು ಅವರ ತಂಡ ಕೈಗೊಂಡ ರೀತಿ ಅನನ್ಯವಾಗಿರುತ್ತದೆ. ಈ ಪ್ರಕ್ರಿಯೆ ಚಿಕ್ಕದಾಗಿದ್ದರೂ ಅತ್ಯಂತ ಚೊಕ್ಕವಾಗಿದ್ದು, ಭಾರತದಂತಹ ಅಭಿವೃದ್ಧಿಶೀಲ ದೇಶವೊಂದು ಜನತಾಂತ್ರಿಕ ವಿಧಿ ವಿಧಾನಗಳನ್ನು ವ್ಯವಸ್ಥೆಯ ವಿವಿಧ ಸ್ಥರಗಳಲ್ಲಿ ಹಂತ ಹಂತಗಳಲ್ಲೂ ಹೇಗೆ ಅಳವಡಿಸಿಕೊಳ್ಳ ಬಹುದೆಂಬುದಕ್ಕೆ ಹಿಡಿದ ಕನ್ನಡಿಯಂತಿತ್ತು. ಭಾರತದಂತಹ ಜನತಾಂತ್ರಿಕ ರಾಷ್ಟ್ರಒಂದರಲ್ಲಿ ಸರ್ಕಾರ ಮತ್ತು ಮಾರುಕಟ್ಟೆಗಳು ಅತ್ಯಂತ ತ್ವರಿತವಾಗಿ ಮೇಲೇಳುತ್ತಾ, ಗಟ್ಟಿಯಾಗುತ್ತ ಬರುತ್ತಿದ್ದರೂ ಜನತಂತ್ರದ ಮೂಲತತ್ವ ಗಳಾದ ಸ್ವಾತಂತ್ರ ಮತ್ತು ಸಮಾನತೆಗಳನ್ನೆ ಅತ್ಯಂತ ವ್ಯಾವಹಾರಿಕ ಮಜಲುಗಳಲ್ಲಿ ತಿರುಚಿ ಮೂಲೆಗುಂಪಾಗುವಂತೆ ಮಾಡುತ್ತಿರುವುದು ವಿಪರ್ಯಾಸ. ಹಾಗೇ, ನಮ್ಮ ವ್ಯವಸ್ಥೆಯಲ್ಲಿ ಭ್ರಷ್ಟತೆ, ಅನೈತಿಕತೆ, ಹಿಂಸೆಗಳೂ, ಅಧಿಕವಾಗುತ್ತಾ ಬಂದಿರುವುದು. ಈ ಬೆಳವಣಿಗೆಗೆ ನಿಯಂತ್ರಣ ಹಾಕಿ, ಜನತಂತ್ರವನ್ನು ಒಂದು ನಿರ್ಧಿಷ್ಟ ದಿಕ್ಕಿಗೆ ಕೊಂಡೊಯ್ಯಲು ನಾಗರೀಕ ಸಮಾಜ ಮತ್ತು ಸಮುದಾಯ, ಅವುಗಳ ಮುಖವಾಣಿಗಳಾದ ಸ್ವಯಂ ಸೇವಾಸಂಸ್ಥೆಗಳು, ಅವುಗಳಿಗೆ ತಾತ್ವಿಕ ನೆಲಗಟ್ಟು ನೀಡುವ ಕ್ರಿಯಾ ಶೀಲ ಪ್ರಗತಿಪರ ಬುದ್ದಿಜೀವಿಗಳ ವರ್ಗ ಇವುಗಳೆಲ್ಲಾ ಎದ್ದೇಳುವುದು ಇಂದು ಅತ್ಯಗತ್ಯ. ಪಿ.ವಿ.ಸತೀಶ್ ನೇತೃತ್ವದ ರೈತ ತೀರ್ಪು ಈ ನಿಟ್ಟಿನಲ್ಲಿ ಅತ್ಯಂತ ಮಹತ್ವದ ಒಂದು ಪ್ರಯತ್ನ ಎಂಬುದರಲ್ಲಿ ಅನುಮಾನವಿರದು.

ಆದರೆ ಈ ಅತ್ಯಂತ ಮಹತ್ವದ ಪ್ರಯತ್ನದಿಂದ ಹೊರಬಂದ ''ರೈತ ತೀರ್ಪು'' ಮಾತ್ರ ಸ್ವಲ್ಪ ನಿರಾಸೆ ತರುವಂತಿದೆ. ಇವುಗಳಲ್ಲಿ ಹೊಸತೇನೂ ಇರದು. ಅತೀ ನೀರು, ರಾಸಾಯನಿಕ ಬೇಡುವ ಏಕ ಪದ್ಧತಿ ಬೆಳೆಯಾದ ಕಬ್ಬಿಗೆ ಸಂಶೋಧನೆ ಸಾಲದೆಂಬ ಸ್ವಲ್ಪ ವಿರೋದಾಭಾಸದ ತೀರ್ಪು ಒಂದೆಡೆಯಾದರೆ ಕುರಿಗಾಹಿಗಳಿಗೆ ನೀತಿ ನಿರೂಪಣೆಯಲ್ಲಿ ಪಾಲುಬೇಕೆಂಬ ಸರಳ ಅಗೌಣ್ಯ ತೀರ್ಪು ಈ ಪ್ರಕ್ರಿಯೆಯಲ್ಲಿ ಹೊರಬಿದ್ದಿವೆ. ಹಾಗೇ, ಕೃಷಿಗೆ ಪ್ರತ್ಯೇಕ ಬಜೆಟ್, ವಿಶೇಷ ವಿತ್ತವಲಯದ ಮೂಲಕ ರೈತರ ಭೂಮಿ ಕಬಳಿಕೆಗೆ ತಡೆ ಮುಂತಾದ ಕೃಷಿ ಸಂಶೋಧನೆಗೆ ನೇರವಾಗಿ ಸಂಬಂಧಿಸದ ಹಲವು ತೀರ್ಪುಗಳು ಹೊರಬಿದ್ದಿರುವುದು ಅರ್ಥವಾಗದ ವಿಚಾರವಾಗಿದೆ.

ಕೃಷಿವಲಯ ಇಂದು ತೀವ್ರ ಸಂಕಷ್ಟದಲ್ಲಿದೆ. ಸಂತೃಪ್ತ ಬದುಕಿರಲಿ ರೈತ ಸಮುದಾಯಕ್ಕೆ ಕನಿಷ್ಟ ಜೀವನ ಭದ್ರತೆ ನೀಡಲೂ ಒಂದು ಕಸುಬಾಗಿ ಇಂದು ಕೃಷಿ ಸೋಲುತ್ತಿದೆ. ಬೇರಾವ ದಾರಿಕಾಣದ ಭಾರತೀಯ ರೈತ ಕೃಷಿ ಕೈಬಿಡುವುದಿರಲಿ ಬದುಕಿಗೇ ವಿದಾಯ ಹೇಳಿ ಆತ್ಮಹತ್ಯೆ ಹಾದಿ ಹಿಡಿದಿರುವನು. ರೈತ ಸಮುದಾಯಕ್ಕೆ ಸಂತೃಪ್ತ ಬದುಕು ನೀಡುವಲ್ಲಿ ಕೃಷಿ ಸಂಶೋಧನೆಯ ಪಾತ್ರ ಇದ್ದೇ ಇದೆ. ಈ ಬಗ್ಗೆ ನಿರ್ಧಿಷ್ಟ ತೀರ್ಪುಗಳು ಅವರಿಂದಲೇ ಬರುವ ತೀವ್ರ ನಿರೀಕ್ಷೆ ಇತ್ತು. ಇವೆಲ್ಲಾ ಈಡೇರಲು ಪಿ.ವಿ.ಸತೀಶ್ ನೇತೃತ್ವದ ಈ ಪ್ರಯತ್ನ ಇನ್ನೂ ಆಳಕ್ಕಿಳಿಯಬೇಕಾಗಿದೆ.

ಈ ನಿಟ್ಟಿನಲ್ಲಿ ಕೃಷಿ ಸಂಶೋಧನೆಯ ಪಾತ್ರಕ್ಕೆ ಇತಿಮಿತಿಗಳಿವೆ. ರೈತನಿಗೆ ಅಗತ್ಯವಾಗಿರುವ ಎರಡು ಮೂಲಭೂತ ಅಂಶಗಳು ನೀರು ಮತ್ತು ಬೆಲೆ. ನೀರಿಗಾಗಿ ಪ್ರಕೃತಿಯೊಡನೆ ಆತ ಜೂಜಾಡುತ್ತಿದ್ದರೆ ಬೆಲೆಗಾಗಿ ಮಾರುಕಟ್ಟೆ ಯಲ್ಲಿ ಜೂಜಾಡುವಂತಾಗಿದೆ. ಈ ಎರಡೂ ಜೂಜನ್ನು ತಪ್ಪಿಸುವಂತಾದಲ್ಲಿ ರೈತನ ಬದುಕು ಹಸನಾಗಬಹುದಾಗಿದೆ. ಆಗಮಾತ್ರ ಸತೀಶರ ಈ ಪ್ರಯತ್ನ ಅಂತಿಮ ಹಂತ ತಲುಪುವಂತಾಗುತ್ತದೆ.

ಡಾ|| ಪ್ರಕಾಶ್ ಕಮ್ಮರಡಿ

ವಿದ್ಯಾರ್ಥಿಗಳ ಅನುಶೋಧನೆಗಳು

ಮದ್ದೂರು ಬಸ್ ನಿಲ್ದಾಣದಿಂದ 12 ಕಿ.ಮಿ.ದೂರದಲ್ಲಿರುವ ಶಿವಾರಗುಡ್ಡ ಹಳ್ಳಿಯ ಜವಾಹರ್ ನವೋದಯ ವಿದ್ಯಾಲಯ ಪಟ್ಟಣದ ಗಡಿಬಿಡಿ ವ್ಯಾಮೋಹದಿಂದ ದೂರ ಉಳಿದ ಹಳ್ಳಿ. ಆದರೆ ಇಲ್ಲಿನ ಮಕ್ಕಳು ಸದಾ ಕಾರ್ಯ ನಿರತರು. ಇವರಿಗೆ ಮಾರ್ಗದರ್ಶನವಾಗಿ ಜೀವಶಾಸ್ತ್ರದ ಅಧ್ಯಾಪಕಿ ರೇಮನಿಯರವರಾಗಿದ್ದಾರೆ. ಇವರನ್ನು ದೆಹಲಿಯಲ್ಲಿ ಅತ್ಯುತ್ತಮ ಶಿಕ್ಷಕಿಯೆಂದು ಆಯ್ಕೆ ಮಾಡಿ ಅಭಿನಂದಿಸಲಾಗಿದೆ. ಇವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಮಾಡಿರುವ ಕೆಲವು ಅನುಶೋಧನೆಗಳನ್ನು ಇಲ್ಲಿ ಕೊಡಲಾಗಿದೆ.

ಪಾರ್ಥೇನಿಯಂ ಕೀಟನಾಶಕವಾಗಿ

ಅಧ್ಯಾಪಕಿ ರೇಮನಿ ಹಾಗೂ ವಿದ್ಯಾರ್ಥಿನಿ ಅನಿತ ಮಾಡಿದ ಒಂದು ಪ್ರಯೋಗ, ಇದೇ ಪಾರ್ಥೇನಿಯಂ ಗಿಡದ ಮೇಲೆ. ದೂರ ದೇಶಗಳಿಂದ ನಮ್ಮ ಪರಿಸರಕ್ಕೆ ಸೇರಿ, ಮಾರಕ ಕಳೆಯಾಗಿ, ಹಲವಾರು ರೋಗ ರುಜಿನಗಳಿಗೆ ಕಾರಣವಾದ ಈ ಪಾರ್ಥೇನಿಯಂ ಒಂದು ಜೈವಿಕ ಕೀಟನಾಶಕವಾಗಿ ಹೊರ ಬಿದ್ದಿದೆ.

"ಅತಿ ಸುಲಭವಾಗಿ ಎಲ್ಲೆಲ್ಲೂ ಸಿಗುವ ಗಿಡ. ಇದಕ್ಕಾಗಿ ಖರ್ಚು ಮಾಡಬೇಕಿಲ್ಲ, ಮಾಡುವುದೂ ಅತಿ ಸುಲಭ. ಪ್ರಯೋಗ ಶಾಲೆಯ ನೆರವಿಲ್ಲದೇ, ಕೃಷಿಕರ ತೋಟಗಳಲ್ಲಿ ಅವರೇ ತಯಾರಿಸಿಕೊಳ್ಳಬಹುದಾದದ್ದು, ಉಳಿದ ತ್ಯಾಜ್ಯ ಗೊಬ್ಬರವಾದೀತು. ಯಾವುದೇ ವಿಷದ ಉಳಿಕೆ ಇಲ್ಲ, ಸುರಕ್ಷಿತವಾಗಿ ಸಿಂಪಡಿಸಬಹುದು. ಸಿಂಪಡಣೆಯ ಸಮಯದಲ್ಲಿ ಮುಖವಾಡದ ಅವಶ್ಯಕತೆ ಇಲ್ಲ" ಎಂದು ವಿವರಿಸುತ್ತಾರೆ ಶ್ರೀಮತಿ ರೇಮನಿ.

ವಿಧಾನ : ಗಿಡದ ತಾಜಾ ಎಲೆಗಳನ್ನು ಸಂಗ್ರಹಿಸಿ, ಕತ್ತರಿಸಿ, ಅರೆದು, ರಸ ಹಿಂಡಿ, ಅದನ್ನು ಸೋಸಿಕೊಂಡು ಬಂದಂತಹ ದ್ರಾವಣವನ್ನು ಹೇನುಗಳಿರುವ ಗಿಡಗಳ ಮೇಲೆ ಸಿಂಪಡಿಸಲಾಯಿತು. ತುಲನಾತ್ಮಕವಾಗಿ ಬೇವಿನ ಕಷಾಯ, ಹಾಗೂ ರಾಸಾಯನಿಕ ಕೀಟನಾಶಕವಾದ ಡೈ ಮಿತೊಯೇಟ್ ಸಹ ಸಿಂಪಡಿಸಲಾಯಿತು. ಪಾರ್ಥೇನಿಯಂ ದ್ರಾವಣ ರಾಸಾಯನಿಕ ಕೀಟ ನಾಶಕದಷ್ಟೇ ಪ್ರಭಾವಶಾಲಿಯಾಗಿತ್ತು. ಬೇವಿನ ದ್ರಾವಣಕ್ಕಿಂತ ಉತ್ತಮ ಪರಿಣಾಮ ಪಾರ್ಥೇನಿಯಂ ದ್ರಾವಣ ನೀಡಿದ್ದು ಸ್ಪಷ್ಟವಾಗಿ ಕಂಡು ಬಂದಿದೆ. ಮಂಡ್ಯ, ಮದ್ದೂರಿನ ಹಲವಾರು ರೈತರು ಈ ದ್ರಾವಣವನ್ನು ಉಪಯೋಗಿಸುತ್ತಿದ್ದಾರೆ. ಶಾಲೆಯ ಕೈ ತೋಟದಲ್ಲಿ ಇದರ ಉಪಯೋಗವಾಗಿದೆ. ಕಳೆಯ ಉಪಟಳ ತಾನಾಗಿ ಕಮ್ಮಿಯಾಗಿದೆ ಎಂದು ಶಿಕ್ಷಕಿ ರೇಮನಿ ಮತ್ತು ವಿದ್ಯಾರ್ಥಿನಿ ಅನಿತ ಅವರು ವಿವರಿಸಿದ್ದಾರೆ. ಈ ಅನುಶೋಧನೆಯು 2005ರ ಮೇ ತಿಂಗಳಿನಲ್ಲಿ ಅಮೇರಿಕಾದ ಆರಿಝೋನದಲ್ಲಿ ನಡೆದ ಅಂತರಾಷ್ಟ್ರೀಯ ಸ್ಪರ್ಧೆಯಲ್ಲಿ ಬಹುಮಾನಗಳಿಸಿರುವುದಲ್ಲದೇ ಅತಿ ಹೆಚ್ಚು ಮೆಚ್ಚುಗೆಗಳಿಸಿದ ಪ್ರಯೋಗ ಆಗಿದೆ.

ಸೊಳ್ಳೆ ವಿಕರ್ಷಕ ಮೇಣದ ಬತ್ತಿಗಳು

ದುರಂತವೆಂದೇ ಪ್ರಸಿದ್ಧವಾದ ಈ ಡ್ಯುರಾಂಟ ಫ್ಲ್ಯುಮೇರಿ ಸಸ್ಯ, ಪಾರ್ಕಗಳಲ್ಲಿ, ರಸ್ತೆ ಬದಿಗಳಲ್ಲಿ ಬೆಳೆಯುತ್ತದೆ. ಗಿಡವಾದರೆ ಇದರ ಹೂವು, ಹಣ್ಣು ಹಲವಾರು ಪಕ್ಷಿಗಳನ್ನು ಆಕರ್ಷಿಸುತ್ತವೆ. ಇದರ ಎಲೆಗಳಲ್ಲಿರುವ ರಸವೇ ಸೊಳ್ಳೆ ವಿಕರ್ಷಕ ಮತ್ತು ಪ್ರಯೋಗಕ್ಕೆ ಮೂಲ ವಸ್ತು. ಜವಾಹರ್ ನವೋದಯ ವಿದ್ಯಾಲಯದ ಶಿಕ್ಷಕಿ ರೇಮನಿಯವರ ಮಾರ್ಗದರ್ಶನಲ್ಲಿ ಅವರ ಮತ್ತೋರ್ವ ವಿದ್ಯಾರ್ಥಿನಿಯಾದ ಶಾಂಭವಿಯವರು ಇದರ ಮೇಲೆ ಪ್ರಯೋಗ ನಡೆಸಿ ಸೊಳ್ಳೆ ವಿಕರ್ಷಕ ಮೇಣದ ಬತ್ತಿಗಳನ್ನು ತಯಾರಿಸಿದ್ದಾರೆ.

ತಯಾರಿಸುವ ವಿಧಾನ : 100 ಗ್ರಾಂ ಡ್ಯುರಾಂಟದ ಎಲೆಗಳನ್ನು ಭಟ್ಟಿ ಇಳಿಸಿದ ನೀರಿನಲ್ಲಿ (*Distilled water*) ಒಂದು ರಾತ್ರಿ ನೆನೆಸಿ, ಬೆಳಿಗ್ಗೆ ನುಣ್ಣಗೆ ಅರೆದು, ರಸ ಸೋಸಿಕೊಂಡು 50 ಗ್ರಾಂ ಕರಗಿಸಿದ ವ್ಯಾಕ್ಸಿನಲ್ಲಿ 10 ಮಿ.ಲೀ. ಎಲೆಗಳ ರಸ ಹಾಕಿ ಹದನೋಡಿ ಅಚ್ಚಿಗೆ ಸುರಿದು ಮೇಣದ ಬತ್ತಿಗಳನ್ನು ತಯಾರಿಸುತ್ತಾರೆ. ಕತ್ತಲಾದಾಗಲೇ ಬೆಳಕಿನ ಅವಶ್ಯಕತೆ. ಹಾಗೆಯೇ ಸೊಳ್ಳೆಗಳಿಗೂ ಸದಾವಕಾಶ. ಈ ಸೊಳ್ಳೆ ವಿಕರ್ಷಕ ಮೇಣದ ಬತ್ತಿಗಳನ್ನು ಹಚ್ಚಿಟ್ಟರೆ ಸೊಳ್ಳೆಗಳು ಪರಾರಿಯಾಗುತ್ತವಂತೆ. ಈ ಪ್ರಯೋಗವನ್ನು ಬೇವಿನ ಎಲೆಯ ರಸದೊಂದಿಗೆ ಹೋಲಿಸಿದಾಗ ಡ್ಯುರಾಂಟಾದ ರಸದ ಪ್ರಭಾವ ಹೆಚ್ಚಿರುವುದು ದಾಖಲಾಗಿದೆ. ಇಂತಹ ಪರಿಸರ ಸ್ನೇಹಿ ಸೊಳ್ಳೆ ವಿಕರ್ಷಕ ಮೇಣದ ಬತ್ತಿಯಿಂದ ವಾತಾವರಣ ಶುದ್ಧವಾಗಿರುತ್ತದೆ. ಇದನ್ನು ಬಳಸುವುದರಿಂದ ಯಾವುದೇ ದುಷ್ಪರಿಣಾಮಗಳಾಗುವ ಆತಂಕವಿರುವುದಿಲ್ಲ. ಅಲ್ಲದೆ ಮೇಣದ ಬತ್ತಿ ಉರಿಯುವಾಗ ಹೊಗೆ ಕೂಡ ಕಂಡು ಬರುವುದಿಲ್ಲ ಎಂದು ಮೇಣದ ಬತ್ತಿ ಉಪಯೋಗಿಸಿದವರ ಅಭಿಪ್ರಾಯವಾಗಿದೆ.

ಲೇಖನ – ಅನಸೂಯ ಶರ್ಮ

ಕೀಟಾಣುಗಳ ಹತೋಟಿಗೆ ಆಕಳಿನ ಗಂಜಲ

ಸಾವಯವ ಕೃಷಿಕರಾಗಿರುವ ಪುರುಶೋತ್ತಮಭಾಯಿಯವರು ಗುಜರಾತಿನ ಜುನಾಗಡ್ ಜಿಲ್ಲೆಯವರಾಗಿದ್ದಾರೆ. ಸಸ್ಯ ಕೀಟಾಣುಗಳು ಗಿಡಗಳಲ್ಲಿನ ಸಾರವನ್ನು ಹೀರಿಕೊಳ್ಳುವುದರಿಂದ ಇಳುವರಿಯು ಕಡಿಮೆಯಾಗುತ್ತದೆ. ಇದನ್ನು ನಿಯಂತ್ರಿಸಲು ಪುರುಶೋತ್ತಮಭಾಯಿಯವರು ಒಂದು ಕೆ.ಜಿ. ಎಕ್ಕದ ಎಲೆಗಳು (*Calotropis procera (Ait)F. Ait*), ಒಂದು ಕೆ.ಜಿ. ಬೇವಿನ ಎಲೆ (*Azadirachta indica A. Juss.*), ಒಂದು ಕೆ.ಜಿ. ಸೀತಾಫಲ ಎಲೆ (*Annona squamosa L.*), ಒಂದು ಕೆ.ಜಿ. ಲೋಳೆಸರ (*Aloe vera(L.) Burm..f.,*) ಮತ್ತು ಒಂದು ಕೆ.ಜಿ. ದತ್ತೂರ (*Datura starmonium L.*), ಇವುಗಳನ್ನು 25 ಲೀಟರ್ ಆಕಳ ಗೋಮೂತ್ರದಲ್ಲಿ ಕೊಳೆಯಲು ಬಿಡುತ್ತಾರೆ. ಸೋಸಿ ಬಂದಿರುವಂತಹ ಕಷಾಯವನ್ನು 15 ಲೀಟರ್ ನೀರಿಗೆ ಒಂದು ಲೀಟರ್‌ನಂತೆ ಸೇರಿಸಿಕೊಂಡು ಕೀಟಗಳ ದಾಳಿಗೆ ಒಳಗಾಗಿರುವ ಗಿಡಗಳಿಗೆ ಸಿಂಪಡಿಸುತ್ತಾರೆ.

(ವೈಜ್ಞಾನಿಕ ಹಿನ್ನಲೆ : ಆಕಳಿನ ಗಂಜಲಿನಲ್ಲಿ ಹಾಗೂ ಮೇಲೆ ಬಳಸಿರುವಂತಹ ಗಿಡಗಳಲ್ಲಿ ಕೀಟನಾಶಕ ಗುಣಗಳು ಇರುವುದನ್ನು ಈಗಾಗಲೇ ದಾಖಲಿಸಲಾಗಿದೆ. ವಿವರಕ್ಕೆ www.compasnet.org ನೋಡಿರಿ.)

ಮೂಲ : Honey Bee Vol 20(1) January - March 2009

ಕೋತಿ-ಅಳಿಲುಗಳಿಂದ ತೆಂಗಿನಕಾಯಿ ರಕ್ಷಣೆ

ತೋಟದ ಬೆಳೆಗಳಾದ ಮಾವು,ತೆಂಗು, ಅಡಿಕೆ ಹಲವಾರು ಹಣ್ಣಿನ ಗಿಡಗಳಿಗೆ ಮಂಗಗಳ ಉಪಟಳ ತಪ್ಪಿದ್ದಲ್ಲ. ನಾನಾ ರೀತಿಯ ವಿಧಾನಗಳಿಂದ ಮಾಡಿದ ತಂತ್ರಗಾರಿಕೆಗಳಿಂದ ಸೋತು ಹೈರಾಣಾಗಿರುವ ರೈತರ ಬವಣೆ ಹೇಳತೀರದು. ಸಾಮಾನ್ಯವಾಗಿ ತೆಂಗಿನ ಗಿಡಗಳಿಗೆ ಕೋತಿಗಳ ಕಾಟ ಇದ್ದಿದ್ದೇ. ಹಿಂಡು ಹಿಂಡಾಗಿ ತೋಟಗಳಿಗೆ ಆಗಮಿಸುವ ಕೋತಿಗಳು ಕಾಯಿಗಳನ್ನು ಕಿತ್ತು ನೀರು ಕುಡಿದು ಎಸೆಯುವುದಲ್ಲದೇ ಗಿಡಗಳಿಂದ ಗಿಡಗಳಿಗೆ ಹಾರಾಡಿ ಗೊನೆಗಳನ್ನು ಹಾಳು ಮಾಡುತ್ತವೆ. ಇದರೊಂದಿಗೆ ಹೂವು, ಚಿಕ್ಕ ಚಿಕ್ಕ ಕಾಯಿಗಳು ಉದುರಿ ಗೊನೆಗಳಿಗೆ ಹಾನಿಉಂಟಾಗುತ್ತದೆ. ಇದಕ್ಕೆ ಪರಿಹಾರವಾಗಿ ಮಲೆನಾಡ ರೈತರು ತಗಡು ಅಥವಾ ಪ್ಲಾಸ್ಟಿಕ್ ಬ್ಯಾರಲ್‌ಗಳ ಮೇಲ್ಭಾಗ ಮತ್ತು ತಳಭಾಗಗಳನ್ನು ತೆಗೆದು ಲಂಭವಾಗಿ ಕತ್ತರಿಸಿ ಅದನ್ನು ಸುಮಾರು 8-10 ಅಡಿಗಳ ಮೇಲೆ ತೆಂಗಿನ ಕಾಂಡಗಳಿಗೆ ಬಿಗಿಯಾಗಿ ಹೊದೆಸುತ್ತಾರೆ. ಹೊದೆಸುವ ಮುನ್ನ ಅದರ ಮೇಲೆ ಹಳದಿ ಬಣ್ಣವನ್ನು ಬಳಿದು ಆರಿದ ನಂತರ ಅದಕ್ಕೆ ಹರಳೆಣ್ಣೆಯನ್ನು ಸವರುತ್ತಾರೆ. ಕಾರಣ ಅಳಿಲುಗಳು ಅಥವಾ ಮಂಗಗಳು ಮರ ಏರುವಾಗ ಕಾಲು ಜಾರುವ ಸಲುವಾಗಿ ಮತ್ತು ಹಳದಿ ಬಣ್ಣವು ತೆಂಗಿನ ಗಿಡಗಳಿಗೆ ಹಾನಿಯುಂಟು ಮಾಡುವ ಕೀಟಗಳನ್ನು ಆಕರ್ಷಿಸಿ ಲೇಪಿಸಿರುವಂತಹ ಎಣ್ಣೆಗೆ ಅಂಟಿಕೊಳ್ಳುವಂತೆ ಮಾಡುತ್ತದೆ. ಈ ಹೊದಿಕೆಯನ್ನು ತಿಂಗಳಿಗೊಮ್ಮೆ ತೆಗೆದು ಸ್ವಚ್ಛಗೊಳಿಸಿ ಎಣ್ಣೆಯನ್ನು ಸವರಿ ಪುನಃ ಕಾಂಡಗಳಿಗೆ ಹೊದೆಸುತ್ತಾರೆ. ಈ ರೀತಿ ಮಲೆನಾಡಿನ ರೈತರು ಕೋತಿಗಳ ಹಾವಳಿಗೆ ಒಂದು ಪರಿಹಾರವನ್ನು ಕಂಡುಕೊಂಡಿದ್ದಾರೆ.

ಮೂಲ: ರೈತ ಧ್ವನಿ, ಏಪ್ರೀಲ್ 20

ಹತ್ತಿ ಬೆಳೆಯ ಉಪದ್ರವಿಗಳ ಹತೋಟಿ

ಆಂಧ್ರಪ್ರದೇಶದ ವಾರಂಗಲ್ ಜಿಲ್ಲೆಯ ಗೌತಮ್ ರಾಜಮಲ್ಲುರವರು ಬೇವಿನ ಕಷಾಯ ಮತ್ತು ಕಾಸರ್ಕದ *(Strychnos nux-vomica L)* ಕಷಾಯವನ್ನು ಹತ್ತಿಬೆಳೆಯ ಉಪದ್ರವಿಗಳ ಹತೋಟಿಗೆ ಉಪಯೋಗಿಸುತ್ತಾರೆ. ಹತ್ತಿ ಹೂ ಬಿಡುವ ಸಮಯದಲ್ಲಿ ಗೌತಮ್‌ರವರು ಬೇವಿನ ಕಷಾಯವನ್ನು 20 ದಿನಗಳಲ್ಲಿ 3 ಬಾರಿ ಸಿಂಪಡಿಸುತ್ತಾರೆ. ನಂತರದ 20 ದಿನಗಳಲ್ಲಿ ಕಾಸರ್ಕದ ಕಷಾಯವನ್ನು ಒಂದು ಅಥವಾ ಎರಡು ಬಾರಿ ಸಿಂಪಡಿಸುತ್ತಾರೆ. ಈ ಕಷಾಯಗಳನ್ನು ತಯಾರಿಸುವ ವಿಧಾನ ಹೀಗಿದೆ:

ಬೇವಿನ ಕಷಾಯ – ಬೇವಿನ ಹಣ್ಣುಗಳನ್ನು ಪುಡಿಮಾಡಿ ನೀರಿನಲ್ಲಿ ಒಂದು ರಾತ್ರಿ ನೆನೆಸಬೇಕು. ಮರುದಿನ ಬೆಳಗ್ಗೆ ಕಷಾಯವನ್ನು ಸೋಸಿ ಕೊಳ್ಳಬೇಕು. ಮೂರು ಲೀಟರ್ ಕಷಾಯಕ್ಕೆ ಅರ್ಧ ಕೆ.ಜಿ. ಸೋಪಿನ ಪುಡಿಯನ್ನು ಮಿಶ್ರಣ ಮಾಡಿಕೊಂಡರೆ ಒಂದು ಎಕರೆಯ ಬೆಳೆಗೆ ಸಾಕಾಗುತ್ತದೆಯಂತೆ.

ಕಾಸರ್ಕದ ಕಷಾಯ – ಒಂದು ಎಕರೆಗೆ ಅಗತ್ಯವಾದ ಕಷಾಯವನ್ನು ತಯಾರಿಸಬೇಕಾದರೆ 5 ಕೆ.ಜಿ.ಯಷ್ಟು ಕಾಸರ್ಕದ ಹಣ್ಣುಗಳನ್ನು ಪುಡಿಮಾಡಿ ಐದು ಲೀಟರ್ ನೀರಿನಲ್ಲಿ ಮಿಶ್ರಣಮಾಡಬೇಕು. ಅದನ್ನು ಎರಡು ಲೀಟರ್‌ನಷ್ಟು ಆಗುವವರೆಗೆ ಕುದಿಸಬೇಕು. ಇದಕ್ಕೆ ಅರ್ಧ ಕೆ.ಜಿ. ಸೋಪಿನ ಪುಡಿಯನ್ನು ಸೇರಿಸಿ ಸಿಂಪಡಿಸಬೇಕು. ಕಾಸರ್ಕದ ಹಣ್ಣುಗಳು ತುಂಬ ಘಾಟು ಇರುವುದರಿಂದ ಜಾಗ್ರತೆಯಿಂದ ಸಿಂಪಡಿಸಬೇಕು ಎಂದು ಹೇಳಿದ್ದಾರೆ.

(ವೈಜ್ಞಾನಿಕ ಹಿನ್ನೆಲೆ – ಕಾಸರ್ಕದಿಂದ ತಯಾರಿಸಿರುವಂತಹ ಕಷಾಯವು ಅತ್ಯಂತ ವಿಷಯುಕ್ತವಾದ ಸಸ್ಯಕ್ಷಾರವೆಂದು ತಿಳಿದುಬಂದಿದೆ. ಇದನ್ನು ಮೊದಲು ಇಲಿಗಳ ನಿಯಂತ್ರಣಕ್ಕೆ ಉಪಯೋಗಿಸಲಾಗುತ್ತಿತ್ತು. ವಿವರಕ್ಕೆ http://edis.ifas.ufl.edu/PI084 ನೋಡಿರಿ).

ಹಣ್ಣಿನ ನೊಣಗಳ ಹತೋಟಿಗೆ ಕಾಸರ್ಕದ ಬೇರುಗಳು

ಕೇರಳದ, ಪಾಲಕ್ಕಾಡ್ ಜಿಲ್ಲೆಯ ರಾಘವನ್‌ರವರು ತಯಾರಿಸುವ ಕೀಟನಾಶಕದ ವಿವರ ಹೀಗಿದೆ. ಕಾಸರ್ಕದ ಮರದ 100 ಗ್ರಾಂ.ನಷ್ಟು ಬೇರುಗಳನ್ನು ಪುಡಿಮಾಡಿ ಅದರಲ್ಲಿ 100 ಗ್ರಾಂ ಬೆಲ್ಲ ಮತ್ತು ಒಂದು ಲೀಟರ್ ನೀರನ್ನು ಬೆರಸಿ ಕುದಿಸಬೇಕು. ನಂತರ ಶೋಧಿಸಿದಂತಹ ಈ ಕಷಾಯದಲ್ಲಿ 10 ಗ್ರಾಂ ನುಣ್ಣಗೆ ಅರೆದಿರುವಂತಹ ಬೆಳ್ಳುಳ್ಳಿಯನ್ನು ಸೇರಿಸಿ 9 ಲೀಟರ್ ನೀರನ್ನು ಮಿಶ್ರಣ ಮಾಡಬೇಕು. ಇಂತಹ ಮಿಶ್ರಣವನ್ನು ರಾಘವನ್‌ರವರು ಎಲ್ಲಾ ಬೆಳೆಗಳಲ್ಲಿ ಹಣ್ಣಿನ ನೊಣಗಳನ್ನು ನಿವಾರಿಸಲು ಉಪಯೋಗಿಸುತ್ತಾರೆ.

(ವೈಜ್ಞಾನಿಕ ಹಿನ್ನೆಲೆ – ಕಾಸರ್ಕವು ಟೊಮೆಟೊ ಗಿಡದಲ್ಲಿ ಕಾಣಿಸಿಕೊಳ್ಳುವ ನಾಗದಾಳಿ ಹುಳಗಳನ್ನು (Liriomyza trifolii) ಹತೋಟಿಯಲ್ಲಿಡುತ್ತದೆ. (Nath, P and Singh, RK (2007)Vegetable Science). ಬೆಳ್ಳುಳ್ಳಿಯನ್ನು ಕೀಟನಾಶಕವಾಗಿ ಉಪಯೋಗಿಸುವುದು ಈಗಾಗಲೇ ಸಾಬೀತಾಗಿದೆ.)


ಎಳ್ಳಿಗೆ ಬೇವಿನ ಕಷಾಯ

ಗುಜರಾತಿನ, ಜೆಮ್‌ನಗರ್ ಜಿಲ್ಲೆಯ ಮೋಹನ್‌ಭಾಯಿಯವರು ಎಳ್ಳಿನ ಬೆಳೆಯಲ್ಲಿ ಇಳುವರಿಯನ್ನು ಹೆಚ್ಚಿಸಲು ಬೇವಿನ ಕಷಾಯವನ್ನು ಉಪಯೋಗಿಸುತ್ತಾರೆ. ಇದಕ್ಕಾಗಿ ಇವರು ಒಂದು ಕೆ.ಜಿ. ಬೇವಿನ ಎಲೆಗಳನ್ನು 20 ಲೀಟರ್ ನೀರಿನಲ್ಲಿ ಒಂದು ಗಂಟೆಯವರೆಗೆ ಕುದಿಸುತ್ತಾರೆ. ಬಂದಿರುವಂತಹ ಕಷಾಯವನ್ನು ಹೂಗಳು ಬಿಡುವುದಕ್ಕಿಂತ ಮುಂಚೆಯೇ ಬೆಳೆಗಳಿಗೆ ಸಿಂಪಡಿಸುತ್ತಾರೆ. ಇದರಿಂದ ಇಳುವರಿಯು ಎಕರೆಗೆ 120–160 ಕೆ.ಜಿ.ಯವರೆಗೆ ಹೆಚ್ಚಾಗುತ್ತದೆ ಎಂದು ಹೇಳಿದ್ದಾರೆ.

ಮೂಲ: Honey Bee Vol 20(1) January - March 2009

"ಚಿತ್ತಾರ ಕಲೆ"ಯ ಸಂರಕ್ಷಣೆ

'ಚಿತ್ತಾರಕಲೆ'ಯು ಮಲೆನಾಡಿನ ದೀವರ ಜನಾಂಗದವರಲ್ಲಿ ಪರಂಪರಾತ್ಮಕವಾಗಿ ಬಂದಿರುವಂತಹ ಒಂದು ಜಾನಪದ ಕಲೆಯಾಗಿದೆ. ಈ ಕಲೆಯು ರೈತಾಪಿ ಜನರ ಬದುಕಿನ ಸಂದರ್ಭಗಳನ್ನು ಬಿಂಬಿಸುವ ಚಿತ್ರಗಳಾಗಿದ್ದು ಈ ಚಿತ್ರಕಲೆಯನ್ನು ದೀವರ ಜನಾಂಗದವರು ತಮ್ಮ ಹಿರಿಯರಿಂದ ಕಲಿತು ಅದನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇಂತಹವರಲ್ಲಿ ಒಬ್ಬರಾದ ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಹಸ್ವಂತೆ ಗ್ರಾಮದ ಈಶ್ವರ ನಾಯ್ಕರವರು. ಇವರು ಪಿ.ಯು.ಸಿ. ಮತ್ತು ಕಲೆಯಲ್ಲಿ ಡಿಪ್ಲೊಮಾ ಮಾಡಿಕೊಂಡಿದ್ದು ಈ ಕಲೆಯ ಉಳಿವಿಗಾಗಿ, ಇದರ ಅಧ್ಯಯನ ಮತ್ತು ಪ್ರಚಾರವನ್ನು ಪ್ರಾರಂಭಿಸಿದ್ದಾರೆ. ಹತ್ತು ವರ್ಷಗಳ ಹಿಂದೆಯೇ ಹಸ್ವಂತೆಯಲ್ಲಿ 'ಚಿತ್ತಾರ ಚಾವಡಿ' ಎಂಬ ಸಂಘಟನೆಯನ್ನು ಸ್ಥಾಪಿಸಿದ್ದಾರೆ. ಮೈಸೂರಿನಲ್ಲಿ ಅನೇಕರಿಗೆ ತರಬೇತಿಯನ್ನು ನೀಡಿದ್ದಾರೆ.



ಈ ಕಲೆಯು ಮಲೆನಾಡಿನ ಜನರ ಶುಭ ಸೂಚನೆಯ ಸಂಕೇತವಾಗಿದ್ದು ತಮ್ಮ ಮನೆಯ ಗೋಡೆಗಳ ಮೇಲೆ, ಮದುವೆಯ ಸಂದರ್ಭಗಳಲ್ಲಿ, ಭೂಮಿ ಹುಣ್ಣಿಮೆ ಹಬ್ಬದಲ್ಲಿ ಬುಟ್ಟಿಯ ಮೇಲೆ ವಿಶೇಷವಾಗಿ ಇವುಗಳನ್ನು ಚಿತ್ರಿಸುತ್ತಾರೆ. ಚಿತ್ರಗಳನ್ನು ಬಿಡಿಸಲು ಕೆಮ್ಮಣ್ಣಿನ ಕೆಂಪು, ಗುಡ್ಡೇಗೇರು ಕಾಯಿಯ ಕಪ್ಪು, ಅಕ್ಕಿಹಿಟ್ಟಿನ ಬಿಳಿ ಮತ್ತು ಅರಿಶಿಣದ ಹಳದಿ ಈ ಸಾವಯವ ಬಣ್ಣಗಳನ್ನು ಉಪಯೋಗಿಸಲಾಗುತ್ತದೆ. ಈ ಕಲೆಯು ಈಗ ನಗರಗಳಲ್ಲಿಯೂ ಪ್ರಚಲಿತಗೊಳ್ಳುತ್ತಲಿದೆ. ಈಶ್ವರ ನಾಯ್ಕರವರು ಬೆಂಗಳೂರು ಸೇರಿದಂತೆ ಅನೇಕ ನಗರಗಳ ಹಲವಾರು ಶ್ರೀಮಂತರ ಮನೆಗಳ ಗೋಡೆಗಳ ಮೇಲೂ ಹಾಗು ರೆಸಾರ್ಟಗಳಲ್ಲಿಯೂ ಆಧುನಿಕತೆಗೆ ತಕ್ಕಂತೆ ವಿಧ ವಿಧ ಬಣ್ಣಗಳನ್ನು ಉಪಯೋಗಿಸಿಕೊಂಡು ಚಿತ್ತಾರಗಳನ್ನು ಬಿಡಿಸುತ್ತಿದ್ದಾರೆ. ಇವರು ತುಮಕೂರಿನಲ್ಲಿ ಆಯುರ್ವೇದ ವೈದ್ಯರ ಚಿಕಿತ್ಸಾಲಯದ ಗೋಡೆಯ ಮೇಲೆ ಚಿತ್ರಿಸಿದ್ದು ಇದು ಚಿಕಿತ್ಸೆಗೆ ಸಹಕಾರಿಯಾಗಿದೆಯಂತೆ! ಹಾಗೂ ಚಿಕಿತ್ಸಾಲಯಕ್ಕೆ ಬರುವ ವಿದೇಶಿಗಳೂ ಈ ಚಿತ್ತಾರಗಳಿಂದ ಪ್ರಭಾವಿತರಾಗಿದ್ದು ಅವರಿಗೂ ಚಿತ್ರಗಳನ್ನು ಬಿಡಿಸಿ ಕೊಟ್ಟಿದ್ದಾರಂತೆ. ಈಗ ಈ ಕಲೆಯೇ ಈಶ್ವರ ನಾಯ್ಕರ ಜೀವನದ ದಾರಿಯಾಗಿದೆ. ಹಾಗೆಯೇ ಈ ಸಾಂಪ್ರದಾಯಿಕ ಕಲೆಗೂ ಅಸ್ತಿತ್ವ ಸಿಕ್ಕಿದಂತಾಗಿದೆ. *ಹೆಚ್ಚಿನ ಮಾಹಿತಿಗೆ ಈಶ್ವರ ನಾಯ್ಕರವರನ್ನು 9449205209 ಗೆ ಸಂಪರ್ಕಿಸಬಹುದು.*

ಮೂಲ – ಪ್ರಜಾವಾಣಿ, ಗುರುವಾರ, 1 ಮೇ 2008.

ವೇಗದ ಮೊಳಕೆ ಮತ್ತು ಬೆಳವಣಿಗೆಗೆ

ಮುಟ್ಟಿದರೆ ಮುನಿ ಅಥವಾ ನಾಚಿಕೆ ಮುಳ್ಳು ಎಂದೇ ಪ್ರಸಿದ್ಧವಾಗಿರುವ ಈ ಗಿಡ ಕೃಷಿಕರ ತೋಟಗಳಲ್ಲಿನ ಅನಿವಾರ್ಯ ಕಳೆ. ದನಕರುಗಳಿಗೆ ಆಹಾರವಾದರೂ ಈ ಕಳೆಯ ನಿವಾರಣೆ ಕಷ್ಟಸಾಧ್ಯ. ಇದು ದ್ವಿದಳ ಧಾನ್ಯದ ಗುಂಪಿಗೆ ಸೇರಿದ ಗಿಡ. ಬೇರುಗಳಲ್ಲಿ ಬರುವ ಗಂಟುಗಳು ಸಾರಜನಕ ಸ್ಥಿರೀಕರಣಕ್ಕೆ ಸಹಾಯ ಮಾಡುತ್ತವೆ. ಈ ಕಾರಣಕ್ಕಾಗಿ ಮಂಡ್ಯಜಿಲ್ಲೆಯ ಜವಾಹರ್ ನವೋದಯ ವಿದ್ಯಾಲಯದ ಶಿಕ್ಷಕಿ ರೇಮನಿ ಮತ್ತು 9ನೇ ತರಗತಿಯ ಅವರ ವಿದ್ಯಾರ್ಥಿನಿ ಮೋನಿಷ ತಮ್ಮ (ಬೀಜಗಳ ಮೊಳಕೆ ಪ್ರಮಾಣ ವೃದ್ಧಿಸುವ) ಪ್ರಯೋಗಕ್ಕೆ ಆರಿಸಿ ಕೊಂಡಿದ್ದು ಈ ಗಿಡವನ್ನೇ. ಇವರ ಅನುಶೋಧನೆಗೆ 556 ನವೋದಯ ಶಾಲೆಗಳು ಭಾಗವಹಿಸಿದ 'ವಿಭಾಗ ಸ್ಪರ್ಧೆ'ಯಲ್ಲಿ ಗೆಲುವು. ಇನ್‌ಟೆಲ್‌ನವರು ಕೊಲ್ಕತ್ತದಲ್ಲಿ ನಡೆಸಿದ ಸ್ಪರ್ಧೆಯಲ್ಲೂ ಜಯಭೇರಿ ನಂತರ ಮುಂಬೈನಲ್ಲಿ ನಡೆದ 'ಕೋಚಿಂಗ್ ಕ್ಯಾಂಪ್'ಗಳಲ್ಲಿ ಪಡೆದ ಮೆಚ್ಚುಗೆಯು ಅಮೇರಿಕದಲ್ಲಿನ ನೆವಾಡದ 'ರೆನೋ' ದಲ್ಲಿ ನಡೆದ ಅಂತಿಮ ಸ್ಪರ್ಧೆಗೆ ಭಾಗವಹಿಸಲು ಅವಕಾಶ ಕಲ್ಪಿಸಿತು. ಈ ಸ್ಪರ್ಧೆಗೆ 1265 ಅಭ್ಯರ್ಥಿಗಳು ಪ್ರವೇಶ ಪಡೆದಿದ್ದರು. ಮೊದಲ ಮೂರು ಬಹುಮಾನಗಳು ನ್ಯೂಯಾರ್ಕಿನ ಪ್ರಯೋಗಗಳಿಗೆ ದೊರೆತರೂ 5 ಮಂದಿ ತೀರ್ಪುಗಾರರು, ಸ್ಪರ್ಧೆ ನೋಡಲು ಬಂದಿದ್ದ ಸಾವಿರಾರು ಮಂದಿಯ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಿದ ಮೋನಿಷಗೆ 550 ಡಾಲರ್‌ಗಳು, ಮೆಡಲ್ ಹಾಗೂ ಪ್ರಶಸ್ತಿ ಪತ್ರ ದೊರೆತಿದೆ.

ವಿಧಾನ : ಮುಟ್ಟಿದರೆ ಮುನಿ ಗಿಡದ ಬೇರು ಗಂಟುಗಳನ್ನು 10 ಗ್ರಾಂ ನಷ್ಟು ಸಂಗ್ರಹಿಸಿ ಹಬೆಯಲ್ಲಿ ಬೇಯಿಸಿ ಅದನ್ನು ಅರೆದು ಮುದ್ದೆ ಮಾಡಿಕೊಳ್ಳಬೇಕು. ನಂತರ 50 ಮಿ.ಲೀ. ಡಿಸ್ಟಿಲ್ಡ್ ವಾಟರ್‌ನಲ್ಲಿ ಕರಗಿಸಿ ದ್ರಾವಣ ಮಾಡಿಕೊಳ್ಳಬೇಕು. ಈ ದ್ರಾವಣದಲ್ಲಿ 3 .ಗಂಟೆಯ ಕಾಲ ಬೀಜಗಳನ್ನು ನೆನೆಸಿ ಬಿತ್ತನೆ ಮಾಡಬೇಕು. ಈ ಪ್ರಯೋಗವನ್ನು ಹೊರಗಿನಿಂದ ತಂದ ರೈಜೋಬಿಯಂನಿಂದ ಹಾಗೂ ಹಳೆಯ ಪದ್ಧತಿ ಪ್ರಕಾರ ಮೊಳಕೆ ಬರಿಸಿ ತುಲನೆ ಮಾಡಿದಾಗ ಬೇರು ಗಂಟುಗಳ ದ್ರಾವಣದಲ್ಲಿ ನೆನೆಸಿರುವ ಬೀಜಗಳು ಹೆಚ್ಚು ಮತ್ತು ಬೇಗ ಮೊಳಕೆ ಬಂದಿರುವುದು ದಾಖಲಾಗಿದೆ. ಭತ್ತದಲ್ಲಿ ಶೇ.14, ಗೋಧಿಯಲ್ಲಿ ಶೇ.20, ಜೋಳದಲ್ಲಿ ಶೇ.36, ಮೆಣಸಿನಕಾಯಿ ಯಲ್ಲಿ ಶೇ.42, ಬದನೆಯಲ್ಲಿ ಶೇ.32, ಮತ್ತು ಬೆಂಡೆಯಲ್ಲಿ ಶೇ.30ರಷ್ಟು ಹೆಚ್ಚು ಮೊಳಕೆ ಬಂದಿರುವುದು ದಾಖಲಾಗಿದೆ. ಟೊಮೆಟೊ, ಹತ್ತಿ ಮತ್ತು ಜೋಳದ ಮೇಲೂ ಪ್ರಯೋಗ ನಡೆಸಲಾಗಿದ್ದು ಈ ದ್ರಾವಣದಲ್ಲಿ ನೆನೆಸಿದ ಬೀಜಗಳಲ್ಲಿ ಶೇ. 10ರಷ್ಟು ಮೊಳಕೆ ಪ್ರಮಾಣ ಜಾಸ್ತಿಯಾಗಿದೆ. ಅವಧಿಗಿಂತ ಮೂರು ದಿನ ಮೊದಲೇ ಮೊಳಕೆ ಬಂದಿರುವುದೂ ಸುಪ್ತಾವಸ್ಥೆ ಯಲ್ಲಿರುವ ಬೀಜಗಳು ಸಹ ಅವಧಿಗೆ ಮುನ್ನ ಮೊಳಕೆ ಬಂದಿರುವುದು ದಾಖಲಾಗಿದೆಎಂದು ಮೋನಿಷ ವಿವರಿಸಿದ್ದಾಳೆ.

ಪ್ರಯೋಗದ ಎಲ್ಲ ಹಂತಗಳಲ್ಲೂ ಮೋನಿಷಳ ತಂದೆ ತಮ್ಮ ನರ್ಸರಿಯ ಗಿಡಗಳಿಗೆ ಪ್ರಯೋಗಿಸಿದ್ದು ಉತ್ತಮ ಫಲಿತಾಂಶ ದೊರೆತಿದೆಯಂತೆ. ಈ ದ್ರಾವಣ ಉಪಯೋಗಿಸಿದಾಗ ಗಿಡಗಳ ಕಾಂಡ ದಪ್ಪವಾಗಿ, ಎಲೆಗಳು ದಟ್ಟ ಹಸಿರಿನಿಂದ ಕೂಡಿದ್ದು, ಒಂದೂವರೆ ತಿಂಗಳ ಕಾಲ ಯಾವುದೇ ರೋಗ ಬಾಧೆ ಇರಲಿಲ್ಲವೆಂಬುದು ಕಂಡು ಬಂದಿದೆಯಂತೆ. ಗಿಡದ ಬೆಳವಣಿಗೆ, ಇಳುವರಿಯ ಬಗ್ಗೆ ಮೋನಿಷ ತನ್ನ ಪ್ರಯೋಗವನ್ನು ಮುಂದುವರೆಸಿದ್ದಾಳೆ.

ಇಕ್ಸೋರ-ಕಾಕ್ಸೀನಿಯದಿಂದ ನೈಸರ್ಗಿಕ ಬಣ್ಣ

ಇಕ್ಸೋರ (*Ixora coccinca, L*) (ಮಾಲೆ ಹೂಗಿಡ) ಗಿಡವನ್ನು ಅಲಂಕಾರಿಕ ಸಸ್ಯವಾಗಿ ಎಲ್ಲೆಲ್ಲೂ ಬೆಳೆಯುತ್ತಾರೆ. ಅದರಲ್ಲೂ ಹಲವಾರು ಬಣ್ಣಗಳು, ಮಿಶ್ರ ಬಣ್ಣ ಈ ಹೂವಿನಲ್ಲಿ ಕಂಡು ಬರುತ್ತವೆ. ವರ್ಷವಿಡೀ ಹೂವು ಬಿಡುವುದು ಈ ಗಿಡದ ವೈಶಿಷ್ಟ್ಯ.

"ಆಕರ್ಷಕ ಬಣ್ಣ, ವರ್ಷವಿಡೀ ಬಿಡುವ ಗುಣ, ಯಾವುದೇ ವಿಷ ಸಂಬಂಧಿ ಕಣಗಳಿಲ್ಲದಿರುವುದರಿಂದ ನೈಸರ್ಗಿಕ ಬಣ್ಣ ತಯಾರಿಸಲು ಈ ಗಿಡವನ್ನು ಆರಿಸಿಕೊಳ್ಳಲು ಕಾರಣ" ಎಂದು ರೇಮನಿಯವರು ಹೇಳಿದ್ದಾರೆ. ಅವರೊಂದಿಗೆ ಈ ಪ್ರಯೋಗ ಮಾಡಿದವರು ಅವರ ವಿದ್ಯಾರ್ಥಿನಿಯಾದ ಲಾವಣ್ಯ ಹೆಚ್.ಜಿ. ಈ ಪ್ರಯೋಗ ಕೊಲ್ಕತ್ತದಲ್ಲಿ ನಡೆದ ಇನ್‌ಟೆಲ್ ವಿಜ್ಞಾನ ಸ್ಪರ್ಧೆಯಲ್ಲಿ ಜಯಗಳಿಸಿದೆ ಮತ್ತು ಅಮೇರಿಕದ ಅಟ್ಲಾಂಟದಲ್ಲಿ ಮೇ 2008 ರಲ್ಲಿ ನಡೆದ ಅಂತರ ರಾಷ್ಟ್ರೀಯ ವಿಜ್ಞಾನ ಸ್ಪರ್ಧೆಯಲ್ಲಿ ಬಹುಮಾನದ ಜೊತೆ ಹೆಚ್ಚು ಪ್ರಶಂಸೆಗಳಿಸಿದ ಪ್ರಯೋಗವಾಗಿದೆ.

ತಯಾರಿಸುವ ವಿಧಾನ: ಇಕ್ಸೋರದ ಹೂವಿನ ದಳಗಳನ್ನು ಡಿಸ್ಟಿಲ್ಡ್ ವಾಟರ್‌ನಲ್ಲಿ ನೆನೆಸಬೇಕು. ನಂತರ ನುಣ್ಣಗೆ ಅರೆದು ಪೇಸ್ಟ್ ಮಾಡಿಕೊಳ್ಳಬೇಕು. ರಸ ಹಿಂಡಿ ಸೋಸಿಕೊಳ್ಳಬೇಕು. ಈ ರಸದಿಂದ ಜಾಮ್ ತಯಾರಿಸಲಾಗಿದ್ದು, ಐಸ್‌ಕ್ರೀಂ ಹಾಗೂ ಮಿಲ್ಕ್‌ಶೇಕ್‌ಗೆ ಈ ಹೂವಿನ ಒಣಪುಡಿ ಬೆರೆಸಿ ಬಣ್ಣ ಹಾಗೂ ರುಚಿಯನ್ನು ದಾಖಲಿಸಲಾಗಿದೆ. ಕ್ಯಾರೆಟ್‌ನಿಂದ ತೆಗೆದ ರಸದೊಂದಿಗೆ ತುಲನಾತ್ಮಕ ಪ್ರಯೋಗದಲ್ಲಿ ಇಕ್ಸೋರದ ಬಣ್ಣ ಹೆಚ್ಚು ಉತ್ತಮವಾಗಿದೆ ಎಂದು ದೃಢಪಟ್ಟಿದೆ. ಇದೇ ಬಣ್ಣವನ್ನು ಬಟ್ಟೆ, ಹತ್ತಿ ಮತ್ತು ಸಿಲ್ಕ್‌ನೂಲಿಗೆ ಹಾಕಿ ಪರೀಕ್ಷಿಸಲಾಗಿದೆ. ನೀರಿನಲ್ಲಿ ಕರಗುವ ಬಣ್ಣ, ಆಯಿಲ್ ಪೇಂಟ್ ಸಹ ತಯಾರಿಸಲಾಗಿದೆ. ಹಲವು ಬಾರಿ ಪ್ರಯೋಗಗಳನ್ನು ಪುನರಾವರ್ತಿಸಲಾಗಿದೆ. ಈ ನೈಸರ್ಗಿಕ ಬಣ್ಣ ಅಮೇರಿಕಾದವರ ಗಮನವನ್ನು ಕೂಡಾ ಸೆಳೆದಿದೆ. ಈ ಹೂವಿನಲ್ಲಿ ಯಾವ ಅಂಶ ಈ ಬಣ್ಣಕ್ಕೆ ಕಾರಣ, ಈ ಅಂಶವನ್ನು ಬೇರ್ಪಡಿಸಿ ಈಗ ಪ್ರಚಲಿತವಿರುವ ಬಣ್ಣಗಳ ಜೊತೆ ತುಲನಾತ್ಮಕ ಪ್ರಯೋಗ, ಹಾಗೂ ಬೇರೆ ಬೇರೆ ಬಣ್ಣದ ಹೂಗಳ ಮೇಲೆ ಪ್ರಯೋಗ ನಡೆಸಿ ಬಣ್ಣ ತೆಗೆಯುವುದು ನನ್ನ ಮುಂದಿನ ಪ್ರಯೋಗ ಎಂದು ಲಾವಣ್ಯ ಹೇಳಿದ್ದಾಳೆ.

ಲೇಖನ : ಶ್ರೀಮತಿ ಅನಸೂಯ ಶರ್ಮ

ಕೀಟಗಳ ಸಹಾಯದಿಂದ ಗೊಬ್ಬರ ಉತ್ಪಾದನೆ

ಕೇರಳದ, ಕಜರ್‌ಖೋಡ್ ಜಿಲ್ಲೆಯ ದಿವಾಕರನ್‌ರವರು ರೈನೋಸಿರಾಸ್ ಕೀಟದ (Oryctes rhinoceros) ಮರಿಗಳನ್ನು ಉಪಯೋಗಿಸಿಕೊಂಡು ಗೊಬ್ಬರವನ್ನು ತಯಾರಿಸುತ್ತಾರೆ. ಈ ಕೀಟಗಳು ತೆಂಗಿನ ತೋಟದ ದೊಡ್ಡ ಉಪದ್ರವಿ ಯಾಗಿದ್ದು ಇದನ್ನು ಸರಿಯಾದ ರೀತಿಯಲ್ಲಿ ಹತೋಟಿಯಲ್ಲಿಡಲಾಗದಿದ್ದರೆ ತೆಂಗಿನ ಗಿಡದ ಚಿಗುರೆಲೆಗಳಿಗೆ ವ್ಯಾಪಕ ಹಾನಿಯನ್ನುಂಟು ಮಾಡುತ್ತವೆ. ಇವು ಮೊಟ್ಟೆಗಳನ್ನು ಸಗಣಿಯಲ್ಲಿ ಇಡುತ್ತವೆ.

ದಿವಾಕರನ್‌ರವರು ಗೊಬ್ಬರವನ್ನು ತಯಾರಿಸಲು ಬಿದ್ದಿರುವಂತಹ ತೆಂಗಿನ ಎಲೆಗಳನ್ನು ಮತ್ತು ನಾರು ತೆಗೆಯುವ ಕಾರ್ಖಾನೆಯಲ್ಲಿ ಉಳಿದಿರುವಂತಹ ಪದಾರ್ಥಗಳನ್ನು ಗುಣಿಗಳಲ್ಲಿ ತುಂಬಿ ರೈನೋಸಿರಾಸ್ ಕೀಟದ ಮರಿಗಳನ್ನು ಬಿಡುತ್ತಾರೆ. ಇವುಗಳು ಗುಣಿಗಳಲ್ಲಿಯ ಪದಾರ್ಥಗಳನ್ನು ತಿನ್ನುವುದರಿಂದ ಗೊಬ್ಬರವು ತಯಾರಾಗುವುದಲ್ಲದೇ ತೆಂಗಿನ ಮರಗಳನ್ನು ರಕ್ಷಿಸಿದಂತಾಗುತ್ತದೆ ಯಂತೆ!

(ವೈಜ್ಞಾನಿಕ ಹಿನ್ನೆಲೆ –ರೈನೋಸಿರಾಸ್ ಕೀಟದ ಗುಂಪಿಗೆ ಸೇರಿರುವಂತಹ ಇನ್ನೊಂದು ಬಗೆಯ ಕೀಟವು ಸಹ ಸಾವಯವ ಪದಾರ್ಥಗಳನ್ನು ವಿಭಜಿಸಲು ಮತ್ತು ಮಣ್ಣಿನಲ್ಲಿ ಗಾಳಿಯಾಡಲು ಸಹಾಯಮಾಡುತ್ತದೆ ಎಂದು ತಿಳಿದುಬಂದಿದೆ. ವಿವರಕ್ಕೆ Sue,H. Bugs and grubs, Australian Insect Farm http://www.insectfarm.com.au/bugsgrubs.htm downloaded on 18.5.09 ನೋಡಿರಿ)

ಮೂಲ: Honey Bee Vol 20(1) January - March 2009

ಜಲಮೂಲ ಪತ್ತೆಹಿಡಿಯುವುದು

ಗದಗ ಜಿಲ್ಲೆಯ, ಶಿರಹಟ್ಟಿ ತಾಲ್ಲೂಕಿನ, ಯಲ್ಲಾಪುರ ಗ್ರಾಮದ ರೈತರಾದ ಫಕ್ಕಣ್ಣ ಪ್ಯಾಟಿಯವರು ಎಂ. ಎ. ಪದವೀಧರರಾಗಿದ್ದು ಅಂತರ್ಜಲ ಇರುವ ಭೂಮಿಯ ಗುಣಲಕ್ಷಣಗಳ ಬಗ್ಗೆ ವಿಶೇಷವಾದ ಜ್ಞಾನವನ್ನು ಹೊಂದಿದ್ದಾರೆ. ಪ್ರಾರಂಭದಲ್ಲಿ ಅವರಿಗೆ ಅಂತರ್ಜಲವಿರುವ ಸ್ಥಳಗಳ ಅನುಭವವಾಗುತ್ತಿತ್ತಂತೆ. ತಮ್ಮ ಅನಿಸಿಕೆಯು ಸರಿಯೆಂದು ಸಾಬೀತುಪಡಿಸಲು ಭೂ ವಿಜ್ಞಾನಿಗಳನ್ನು ಕರೆದು ಪರೀಕ್ಷಿಸಲು ಅವರು ಸಹ ಅದೇ ಸ್ಥಳವನ್ನು ತೋರಿಸುತ್ತಿದ್ದರಂತೆ. ಹೀಗೆ ಅಭ್ಯಾಸ ಮಾಡುತ್ತಾ ಮಾಡುತ್ತಾ 1992ರಲ್ಲಿ ಪ್ರಾರಂಭಿಸಿದ ಈ ವೃತ್ತಿಯಲ್ಲಿ ಅವರು ಇದುವರೆಗೆ ಸುಮಾರು 200ರರಷ್ಟು ಜಲಮೂಲಗಳನ್ನು ಪತ್ತೆ ಹಚ್ಚಿದ್ದಾರೆ. ಅವರ ಶೋಧನೆಗಳು ಶೇ.95ರಷ್ಟು ಯಶಸ್ವಿಯಾಗಿವೆ. ಇವರು ಜಲಮೂಲಗಳನ್ನು ಪತ್ತೆಹಚ್ಚಲು ತಮ್ಮದೇ ಆದಂತಹ ಎರಡು ವಿಧಾನಗಳನ್ನು ಅನುಸರಿಸುತ್ತಾರೆ. ಮೊದಲನೆಯದಾಗಿ ತಮ್ಮ ಬಲ ಅಂಗೈಯಲ್ಲಿ ನೀರಿರುವ ಒಣ ತೆಂಗಿನಕಾಯಿಯನ್ನು ಮಲಗಿದ ರೀತಿಯಲ್ಲಿ ಹಿಡಿದುಕೊಂಡು ಕೊಳವೆ ಬಾವಿ ಕೊರೆಸಬೇಕಾಗಿರುವ ಹೊಲದಲ್ಲಿ ತಿರುಗಾಡುತ್ತಾರೆ. ನೀರಿನ ಪ್ರಮಾಣ ಹೆಚ್ಚಾಗಿರುವ ಕಡೆ ತೆಂಗಿನಕಾಯಿ ನೇರವಾಗಿ ಎದ್ದು ನಿಲ್ಲುತ್ತದೆಯಂತೆ. ಆ ಸ್ಥಳವೇ ಕೊಳವೆ ಬಾವಿ ಕೊರೆಯಲು ಸೂಕ್ತ ಎಂದು ಸೂಚಿಸುತ್ತಾರೆ. ತಮ್ಮ ಎರಡನೇ ವಿಧಾನದಲ್ಲಿ ಅವರು ಹಸಿ ಬೇವಿನ ಕಡ್ಡಿಯನ್ನು 'ವಿ' (*V*) ಆಕಾರದಲ್ಲಿ ಕತ್ತರಿಸಿ ಅದನ್ನು ಹಿಡಿದುಕೊಂಡು ಹೊಲದಲ್ಲಿ ಓಡಾಡುತ್ತಾರೆ. ನೀರು ಹೆಚ್ಚಾಗಿರುವ ಕಡೆ ಬೇವಿನ ಕಡ್ಡಿ ಭೂಮಿಯತ್ತ ಆಕರ್ಷಿತಗೊಂಡು ವೇಗವಾಗಿ ಬಾಗುತ್ತದಂತೆ. ಬೇವಿನ ಕಡ್ಡಿಯಲ್ಲದೇ ಅವರು ಹಿಲಿಕಡ್ಡಿ, ಕಣಗಲ ಕಡ್ಡಿ, ಹೊನ್ನಾವರಿಕೆ ಕಡ್ಡಿ, ಹಾಗು ತಾಮ್ರ ಮತ್ತು ಅಲ್ಯೂಮಿನಿಯಂನಿಂದ ತಯಾರಿಸಿದಂತಹ ಕಡ್ಡಿಗಳನ್ನೂ ಬಳಸುತ್ತಾರೆ. ಹೀಗೆ ಅವರು 14 ಜಿಲ್ಲೆಗಳಲ್ಲಿ ಜಲಮೂಲಗಳನ್ನು ಪತ್ತೆಹಚ್ಚಿಕೊಟ್ಟಿದ್ದಾರೆ. *ಹೆಚ್ಚಿನ ಮಾಹಿತಿಗೆ ಫಕ್ಕಣ್ಣ ಪ್ಯಾಟಿಯವರನ್ನು 9902790147ಗೆ ಸಂಪರ್ಕಿಸಬಹುದು.*

ಮರಳಿನಿಂದ ಬೀಜಗಳ ಮೊಳಕೆ

ತರಕಾರಿ ಬೆಳೆಗಳಾದ ಎಲೆಕೋಸು, ಹೂಕೋಸು, ಪಪ್ಪಾಯಿ, ಮೆಣಸಿನಕಾಯಿ, ಬದನೆಕಾಯಿಗಳ ಸಸಿಗಳನ್ನು ಮಾಡುವುದು ಪ್ರಾಸದಾಯಕ ಕೆಲಸವಾಗಿರುತ್ತದೆ. ಗುಜರಾತಿನ, ಪಂಚಮಹಲ್ ಜಿಲ್ಲೆಯವರಾದ ವಿನೋದ್‌ಭಾಯಿಯವರು ಒಬ್ಬ ಕೃಷಿಕರಾಗಿದ್ದು, ವ್ಯವಸಾಯದಲ್ಲಿ ಅನೇಕ ಪ್ರಯೋಗಗಳನ್ನು ಮಾಡುತ್ತಾ ಉತ್ತಮ ರೀತಿಯಲ್ಲಿ ಸಸಿಗಳನ್ನು ಮಾಡುವ ವಿಧಾನವನ್ನು ಕಂಡುಕೊಂಡಿದ್ದಾರೆ. ಇದಕ್ಕಾಗಿ ಅವರು ಭೂಮಿಗೆ ಮೊದಲು ಸಾವಯವ ಗೊಬ್ಬರವನ್ನು ಸೇರಿಸಿ ಸಮತಟ್ಟಾಗಿ ಮಾಡಿಕೊಳ್ಳುತ್ತಾರೆ. ನಂತರ ಸಾಲುಗಳನ್ನು ಮಾಡಿಕೊಂಡು ಅರ್ಧ ಅಥವಾ ಒಂದು ಇಂಚು ಅಂತರದಲ್ಲಿ ಬೀಜಗಳನ್ನು ನಾಟಿ ಮಾಡುತ್ತಾರೆ. ಅದರ ಮೇಲೆ ಮರಳನ್ನು ತೆಳುವಾಗಿ ಹರಡಿ ಕೈಗಳಿಂದ ನಿಧಾನವಾಗಿ ಕದಡುತ್ತಾರೆ. ಈ ರೀತಿ ಮಾಡುವುದರಿಂದ ಬೀಜಗಳು ಸುಲಭವಾಗಿ ಮತ್ತು ಬೇಗನೆ ಮೊಳಕೆಯೊಡೆಯುತ್ತವೆ ಮತ್ತು ಬೇರೆ ವಿಧಾನಗಳಿಗೆ ಹೋಲಿಸಿಕೊಂಡರೆ ಐದು ದಿನ ಮೊದಲೇ ಬೀಜಗಳಲ್ಲಿ ಮೊಳಕೆಯನ್ನು ಕಾಣಬಹುದು ಎನ್ನಲಾಗಿದೆ. ಸಸಿಗಳನ್ನು ಸ್ಥಳಾಂತರಿಸುವಾಗ ಬೇರುಗಳಿಗೆ ಯಾವ ತೊಂದರೆಯೂ ಆಗದಂತೆ ಮಣ್ಣಿನಿಂದ ಹೊರ ತೆಗೆಯಬಹುದು ಎಂದು ವಿನೋದ್‌ಭಾಯಿಯವರು ಹೇಳಿದ್ದಾರೆ.

ಮೂಲ: *Honey Bee Vol 20(1) January - March 2009*

ಹಿತ್ತಲಗಿಡದ ಇದುವರೆಗಿನ ಬಹುತೇಕ ಹಳೆ ಸಂಚಿಕೆಗಳು ಲಭ್ಯವಿರುತ್ತವೆ. ರೂ. 600/- ಪಾವತಿ ಮಾಡಿ ಪಡೆದು ಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ನಳಪಾಕ

'ಸುಕೇಳಿ' ಒಣಗಿಸಿರುವ ಬಾಳೆ ಹಣ್ಣು

ಉತ್ತರ ಕನ್ನಡ ಜಿಲ್ಲೆಯ, ಸಿದ್ದಾಪುರ ತಾಲೂಕಿನ, ಹಳ್ಳಿಬೈಲ್ ಸಮೀಪದ ಕೊರಸೆಯ ಶ್ರೀಪಾದ ಭಟ್ಟರು ಡ್ರೈಯರ್‌ಗಳ ಸಹಾಯದಿಂದ ಸುಕೇಳಿ ಎಂದು ಕರೆಯಲಾಗುವ ಒಣಗಿದ ಬಾಳೆಹಣ್ಣುಗಳನ್ನು ತಯಾರಿಸುತ್ತಾರೆ. 45 ವರ್ಷದ ಶ್ರೀಪಾದ ಭಟ್ಟರು ಎಸ್.ಎಸ್.ಎಲ್.ಸಿವರೆಗೆ ಓದಿದ್ದು, ಸಾವಯವವಾಗಿ ಅಡಿಕೆ ಮತ್ತು ಬಾಳೆಯನ್ನು ಬೆಳೆಯುತ್ತಿದ್ದಾರೆ ಮತ್ತು ಸಾವಯವ ಕೃಷಿಕ ಪ್ರಮಾಣ ಪತ್ರವೂ ಲಭಿಸಿದೆ.ಕರಿಬಾಳೆ ಎಂಬ ಜಾತಿಯ ಬಾಳೆಯನ್ನು ಸುತ್ತ ಮುತ್ತಲ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ತಾವು ಬೆಳೆದಿರುವ ಬಾಳೆಹಣ್ಣುಗಳನ್ನಲ್ಲದೇ ಅಕ್ಕಪಕ್ಕ ತೋಟಗಳ ರೈತರಿಂದ ಅದೂ ಸಾವಯವವಾಗಿ ಬೆಳೆದಿರುವ ರೈತರಿಂದ ಮಾತ್ರ ಬಾಳೆಹಣ್ಣುಗಳನ್ನು ಸುಕೇಳಿ ತಯಾರಿಸಲು ಖರೀದಿಸುತ್ತಾರೆ. ಹಿಂದೆ ಹಿರಿಯರು ಹೆಚ್ಚಾದ ಬಾಳೆಹಣ್ಣುಗಳನ್ನು ಬಿಸಿಲಲ್ಲಿ ಒಣಗಿಸಿ ಶೇಖರಿಸಿಕೊಳ್ಳುತ್ತಿದ್ದರು. ಇದನ್ನೇ ಗೃಹ ಉದ್ಯಮವಾಗಿ ಮಾಡುವ ಯೋಚನೆಯಿಂದಲೇ ಅವರು ಡ್ರೈಯರ್‌ಗಳಿಗೆ ಮತ್ತು ಪ್ಯಾಕಿಂಗ್ ಯಂತ್ರಕ್ಕೆ ಬಂಡವಾಳ ಹೂಡಿದ್ದಾರೆ. ಈ ಡ್ರೈಯರ್‌ಗಳು ಏಲಕ್ಕಿ ಮತ್ತು ಕಾಫಿ ಒಣಗಿಸುವ ಡ್ರೈಯರ್‌ಗಳ ಮಾದರಿಯಲ್ಲಿದ್ದು, ಒಳಗಿನ ತಟ್ಟೆಗಳನ್ನು ಹಿಂಡಾಲಿಯಂನಿಂದ ತಯಾರಿಸಲಾಗಿದೆ. ಮೊದಲು ಬಾಳೆಯನ್ನು ಸಿಪ್ಪೆಯಿಂದ ಬೇರ್ಪಡಿಸಿ ತುಂಡುಗಳನ್ನಾಗಿ ಮಾಡಿ ಉತ್ಕೃಷ್ಟ ಬಣ್ಣ ಬರಲು ಅರಿಶಿನದ ನೀರಿನಲ್ಲಿ ತೊಳೆಯುತ್ತಾರೆ. ನಂತರ ನೀರು ಆರಿದ ಮೇಲೆ ಡ್ರೈಯರ್‌ಗಳಲ್ಲಿ ಹರಡುತ್ತಾರೆ. ಡ್ರೈಯರ್‌ಗಳಿಗೆ ಉರುವಲನ್ನು ಉಪಯೋಗಿಸುತ್ತಿದ್ದು, ಹಣ್ಣು ಒಣಗಲು ಮೂರು ದಿನಗಳು ತೆಗೆದು ಕೊಳ್ಳುತ್ತದಂತೆ. ಬಾಳೆ ಗೊನೆಗಳನ್ನು ನೈಸರ್ಗಿಕವಾಗಿ ಹಣ್ಣಾಗಲು ಬಿಡುತ್ತಾರೆ ಅಥವಾ ಗಿಡಮೂಲಿಕೆಗಳಿಂದ ತಯಾರಿಸಿರುವ ಧೂಪಗಳಿಂದ ಹೊಗೆಯನ್ನು ಹಾಕಿ ಹಣ್ಣು ಮಾಡುತ್ತಾರೆ. ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇವರು ಮಾರುಕಟ್ಟೆಯನ್ನು ಕಂಡು ಕೊಂಡಿದ್ದು ಈಗ ಬೆಂಗಳೂರಿನಿಂದಲೂ ಬೇಡಿಕೆ ಬರುತ್ತಿದೆಯಂತೆ. ಮದುವೆ ಸಮಾರಂಭಗಳಲ್ಲೂ ಇವರ ಸುಕೇಳಿ ಉಪಯೋಗವಾಗುತ್ತಿದೆಯಂತೆ. ಸಿದ್ದಾಪುರ ತಾಲೂಕಿನಲ್ಲಿ 5 - 6 ಜನರು ಸುಕೇಳಿಯನ್ನು ತಯಾರಿಸುತ್ತಿದ್ದು, ಕೆ.ಜಿ.ಗೆ 170 - 180 ರೂ. ಬೆಲೆಯಿದೆ. ಅಲ್ಲದೆ ಬಾಳೆಹಣ್ಣನ್ನು ಮಾರುವುದಕ್ಕಿಂತ ಸುಕೇಳಿ ತಯಾರಿಸಿ ಮಾರುವುದರಲ್ಲಿ ಹೆಚ್ಚು ಲಾಭವಿದೆ ಎನ್ನಲಾಗಿದೆ. ಇದರ ತಯಾರಿಕೆಯಲ್ಲಿ ರಾಸಾಯನಿಕ ಬಳಸುತ್ತಿಲ್ಲ. ಇದು ಆರೋಗ್ಯಕರ ಸಿಹಿ ತಿಂಡಿಯಂತಿದ್ದು ಇದರ ಬಗ್ಗೆ ನಗರಗಳಲ್ಲಿ ಪ್ರಚಾರ ನಡೆಸಬೇಕಾಗಿದೆ ಎಂದು ಶ್ರೀಪಾದ ಭಟ್ಟರು ಹೇಳಿದ್ದಾರೆ. ಶಿರಸಿಯಲ್ಲಿ ನಡೆದ ಜಿಲ್ಲಾ ಮಟ್ಟದ ತೋಟಗಾರಿಕಾ ಫಲಪುಷ್ಪ ಪ್ರದರ್ಶನ ದಲ್ಲಿ ಇವರ ಸುಕೇಳಿ ಉತ್ಪನ್ನಕ್ಕೆ ದ್ವಿತೀಯ ಬಹುಮಾನ ಬಂದಿದೆ. *ಹೆಚ್ಚಿನ ಮಾಹಿತಿಗಳಿಗೆ ಶ್ರೀಪಾದ ಭಟ್ಟರನ್ನು 08389-275021 ಅಥವಾ 944023375ಗೆ ಸಂಪರ್ಕಿಸಬಹುದು.*

ವಿಶೇಷ ಸೂಚನೆ

- ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸ ಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.
- ರೈತರು ಮೊದಲು ತಾಂತ್ರಿಕ ಮಾಹಿತಿಗಳನ್ನು ನೀಡಿರುವ ಅಥವಾ ಈ ಅನುಶೋಧನೆಗಳನ್ನು ಸೃಷ್ಟಿಸಿರುವ ವ್ಯಕ್ತಿಗಳ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ . ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.
- ಇಲ್ಲಿ ಪ್ರಕಟಿಸಿರುವ ಪದ್ಧತಿ ಮತ್ತು ತಂತ್ರಜ್ಞಾನಗಳ ಬಳಕೆಯಲ್ಲಿ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ 'ಹಿತ್ತಲಗಿಡ' ಜವಾಬ್ದಾರಿಯಲ್ಲ.

- ಸಂಪಾದಕ

ಮೊಬೈಲ್ ಮೂಲಕ ಪಂಪ್‌ಸೆಟ್ ಚಾಲನೆ

ಹಾವೇರಿ ಜಿಲ್ಲೆಯ, ಶಿಗ್ಗಾಂವ್ ತಾಲೂಕಿನ, ಚಂದಾಪುರ ಗ್ರಾಮದ ಸಿದ್ದಪ್ಪ ಚಂದ್ರಕಾಂತರವರು 7ನೇ ತರಗತಿಯವರೆಗೆ ಓದಿದ್ದು, ಕೃಷಿಕರಾಗಿದ್ದಾರೆ. ಅವರು 30 ಎಕರೆ ಭೂಮಿಯನ್ನು ಹೊಂದಿದ್ದು 6 ಎಕರೆಯಷ್ಟು ನೀರಾವರಿ ಮಾಡಿಕೊಂಡಿದ್ದಾರೆ. ಹತ್ತಿ ಇವರ ಮುಖ್ಯ ಬೆಳೆಯಾಗಿದೆ. ಇವರು ತಮ್ಮ ಜಮೀನಿನಲ್ಲಿರುವ ಪಂಪ್‌ಸೆಟ್‌ಗೆ ಪ್ಯಾನಲ್ ಬೋರ್ಡನಲ್ಲಿ ಮೊಬೈಲ್‌ನ್ನು ಅಳವಡಿಸಿ ಅದರ ಸಹಾಯದಿಂದ ಮೋಟಾರನ್ನು ಪ್ರಾರಂಭಿಸುವ ಮತ್ತು ನಿಲ್ಲಿಸುವ ವಿಶೇಷ ಅನುಶೋಧನೆಯನ್ನು ಮಾಡಿರುವರು. ಹಲವು ರೈತರು ತಮ್ಮ ಹೊಲಗಳಲ್ಲಿ ಪಂಪ್ ಸೆಟ್ ನಿರ್ವಹಣೆಗಾಗಿ ಆಟೋ ಸ್ಟಾರ್ಟರ್ ಉಪಯೋಗಿಸುತ್ತಿದ್ದಾರೆ. ಅದು ಕರೆಂಟ್ ಬಂದರೆ ತನ್ನಷ್ಟಕ್ಕೆ ಆನ್ ಆಗುತ್ತದೆ. ಆದರೆ ಎಲ್ಲೋ ಇರುವ ರೈತರಿಗೆ ಮೋಟಾರ್ ಆನ್ ಆಗಿದೆಯೋ ಇಲ್ಲವೋ ಗೊತ್ತಾಗುವುದಿಲ್ಲ. ಆದರೆ ಸಿದ್ದಪ್ಪನವರು ಮಾಡಿರುವ ತಂತ್ರಜ್ಞಾನದಿಂದ ರೈತರು ಎಲ್ಲೇ ಇರಲಿ ಮೋಟಾರನ್ನು ನಿರ್ವಹಣೆ ಮಾಡಬಹುದು ಮತ್ತು ಆನ್, ಆಫ್ ಆಗಿರುವ ವಿಷಯವನ್ನೂ ತಿಳಿದುಕೊಳ್ಳಬಹುದು. ಇವರು ಪ್ಯಾನಲ್ ಬೋರ್ಡಿನಲ್ಲಿ ಒಂದು ಮೊಬೈಲನ್ನು ಅಳವಡಿಸಿ, ಕೆಲವು ನಂಬರುಗಳನ್ನು ಸೇವ್ ಮಾಡುತ್ತಾರೆ. ಇಂತಹ ಸೇವ್ ಆದ ನಂಬರುಗಳಿಂದ ಒಂದು ಮಿಸ್‌ಕಾಲ್ ಕೊಟ್ಟರೆ ಆನ್ ಆಗುತ್ತದೆ. ಎರಡು ಮಿಸ್‌ಕಾಲ್ ಕೊಟ್ಟರೆ ಮೋಟಾರ್ ಆಫ್ ಆಗುತ್ತದೆ. ಮೋಟಾರ್ ಆನ್ ಆದರೆ ಪ್ಯಾನಲ್ ಬೋರ್ಡನಲ್ಲಿರುವ ಮೊಬೈಲ್ ಕರೆ ಸ್ವೀಕರಿಸಿದಂತಹ ಮೊಬೈಲ್‌ಗೆ ಕಾಲ್ ಮಾಡುತ್ತದೆ. ಆದರೆ ಕರೆಂಟ್ ಸಿಂಗಲ್ ಫೇಸ್‌ನಲ್ಲಿ ಇದ್ದರೆ ಅದು ಬರಿ ರಿಂಗಾಗುತ್ತಿರುತ್ತದೆ ಮತ್ತು ಸೇವ್ ಆಗದೇ ಇರುವಂತ ಮೊಬೈಲ್ ನಂಬರುಗಳಿಂದ ಕಾಲ್ ಮಾಡಿದರು ಕೂಡ ಅದು ಬರಿ ರಿಂಗಾಗುತ್ತಿರುತ್ತದೆ. ಈ ತಂತ್ರಜ್ಞಾನವನ್ನು ಈಗಾಗಲೇ ಅವರು ಒಂದು ವರ್ಷದಿಂದ ತಮ್ಮ ಜಮೀನಿನಲ್ಲಿ ಉಪಯೋಗಿಸುತ್ತಿದ್ದಾರೆ. ಇಂತಹ ಪ್ಯಾನಲ್ ಬೋರ್ಡ ತಯಾರಿಸಲು ಅವರಿಗೆ 5000 ರೂಗಳು ಖರ್ಚಾಗಿರುತ್ತದೆಂದು ಹೇಳಿದ್ದಾರೆ.

ಇವರು ಮನೆಯಿಂದ ಒಂದೂವರೆ ಕಿ.ಮೀ. ದೂರದಲ್ಲಿರುವ ಹೊಲಕ್ಕೆ ಮನೆಯಿಂದಲೇ ನೀರು ನಿರ್ವಹಣೆ ಮಾಡುವ ಯೋಚನೆಯೇ ತಮ್ಮ ಈ ಸಾಧನೆಗೆ ಕಾರಣ ಎಂದು ಹೇಳಿದ್ದಾರೆ. ಅಲ್ಲದೆ ಕರೆಂಟ್ 3 ಫೇಸ್‌ನಲ್ಲಿದ್ದಾಗ ಪ್ಯಾನೆಲ್ ಬೋರ್ಡನಲ್ಲಿರುವ ಮೊಬೈಲ್ ಕಾಲ್ ಮಾಡುವ ಹಾಗೆ ಮಾಡಬೇಕು ಎಂಬುದು ತಮ್ಮ ಮುಂದಿನ ಯೋಚನೆ ಎಂದು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಇವರನ್ನು *ಮೊಬೈಲ್ ನಂ. 9901704748 ಮೂಲಕ ಸಂಪರ್ಕಿಸಬಹುದು.*

ವಿದ್ಯುತ್ ಉತ್ಪಾದಿಸುವ ಸಾಧನ

ಗದಗ್ ಜಿಲ್ಲೆಯ, ಸೋಮಾಪುರ ಹಳ್ಳಿಯ ಸಿದ್ದಪ್ಪನವರು ತಮ್ಮ ಮನೆಗೆ ವಿದ್ಯುತ್‌ಚ್ಛಕ್ತಿಯನ್ನು ತಾವೇ ಸ್ವತಃ ತಮ್ಮ ಹೊಲದಲ್ಲಿ ಗಾಳಿಯಂತ್ರವನ್ನು ನಿರ್ಮಿಸಿಕೊಂಡು ಉತ್ಪಾದಿಸಿಕೊಳ್ಳುತ್ತಿದ್ದಾರೆ. ಓದು ಬರಹ ಬಾರದ, ಸ್ಥಿತಿ ವಂತರಲ್ಲದ 40 ವರ್ಷದ ಸಿದ್ದಪ್ಪನವರು ಒಕ್ಕಲಿಗರಾಗಿದ್ದು ವಿದ್ಯುತ್‌ಚ್ಛಕ್ತಿಯ ಅನುಕೂಲವಿಲ್ಲದ ಬಹುದೂರದ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. "ನನ್ನ ಗುಡಿಸಲು ಬೆಳಕಿಲ್ಲದ ಕತ್ತಲ ಮನೆಯಾಗಿತ್ತು. ಹಗಲಿನಲ್ಲಿಯೂ ನಮ್ಮ ಮನೆಯಲ್ಲಿ ಸೀಮೆ ಎಣ್ಣೆಯ ದೀಪವನ್ನು ಉಪಯೋಗಿಸುತ್ತಿದ್ದೆವು. ಸೀಮೆ ಎಣ್ಣೆಯು ಸಾಲದೇ ಇದ್ದಾಗ ನನ್ನ ಮಕ್ಕಳು ಶಾಲೆಯ ಹೊಮ್‌ವರ್ಕಗಳನ್ನು ಮಾಡಿಕೊಳ್ಳಲು ತುಂಬಾ ಕಷ್ಟ ಪಡುತ್ತಿದ್ದರು" ಎಂದು ಸಿದ್ದಪ್ಪನವರು ಗಾಳಿಯಂತ್ರದ ನಿರ್ಮಾಣದ ಹಿನ್ನೆಲೆಯ ಕಾರಣವನ್ನು ಹೇಳಿದ್ದಾರೆ. 37 ಮನೆಗಳಿರುವ ಆ ಪ್ರದೇಶದಲ್ಲಿ ವಿದ್ಯುತ್‌ಚ್ಛಕ್ತಿ ಇರುವುದು ಇವರ ಮನೆಯಲ್ಲಿ ಮಾತ್ರ. ಈ ಸಾಧನೆಯಲ್ಲಿ ಅವರು ಹಲವಾರು ತೊಂದರೆಗಳನ್ನು ಅನುಭವಿಸಿರುವುದಲ್ಲದೇ ಉಳಿತಾಯ ಮಾಡಿರುವ ಹಣವನ್ನೆಲ್ಲಾ ಖರ್ಚು ಮಾಡಿ ನಿಜವಾಗಿಯು ಅದ್ಭುತ ದೃಷ್ಟಾಂತವನ್ನೇ ಸೃಷ್ಟಿಸಿದ್ದಾರೆ. "ಈ ನನ್ನ ಕನಸು ಸಾಧನೆಯ ರೂಪದಲ್ಲಿ ಸಾಕಾರಗೊಳ್ಳಲು 10 ವರ್ಷಗಳನ್ನೇ ತೆಗೆದುಕೊಂಡಿದೆ. ಅಲ್ಲದೆ ಐದು ಸಾವಿರಗಳಷ್ಟು ಹಣವೂ ವ್ಯಯವಾಗಿದೆ" ಎಂದು ಹೇಳಿದ್ದಾರೆ.

ಯಂತ್ರದ ವಿವರ – ಇವರ ಹೊಲದಲ್ಲಿ ಗಾಳಿಯು ಬೀಸಲು ಯಾವ ಅಡೆತಡೆಯೂ ಇಲ್ಲದಂತ ಅನುಕೂಲವಾದ ಸ್ಥಳ ಆರಿಸಿಕೊಳ್ಳುವುದರೊಂದಿಗೆ ತಮ್ಮ ಕೆಲಸಕ್ಕೆ ಚಾಲನೆಯನ್ನು ನೀಡಿದ್ದಾರೆ. ಇವರ ದನದ ಕೊಟ್ಟಿಗೆಯ ಛಾವಣಿಯ ಎರಡು ತಗಡುಗಳೇ ಗಾಳಿಯಂತ್ರದ ನಾಲ್ಕು ರೆಕ್ಕೆಗಳಾಗಿವೆ. ಕಟ್ಟಿಗೆ ಮತ್ತು ಕಬ್ಬಿಣದ ಕ್ಲಾಂಪ್‌ಗಳು ಯಂತ್ರದ ಪ್ರೊಪೆಲ್ಲರನ್ನು ಅಳವಡಿಸಲು ಬಳಸಿಕೊಳ್ಳಲಾಗಿದೆ. ಬೈಸಿಕಲ್ಲಿನ ರಬ್ಬರ್ ಟ್ಯೆಯರ್‌ನಿಂದ ತಯಾರಿಸಲಾದ ಬೆಲ್ಟ್‌ನ ಸಹಾಯದಿಂದ ಪ್ರೊಪೆಲರನ್ನು ಮೂರು ಚಕ್ರಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ಗಾಳಿಯಂತ್ರದ ಪ್ರಮುಖವಾದ ಚಕ್ರವು, ಎತ್ತಿನ ಗಾಡಿಯ ಗಾಲಿಯದಾಗಿದೆ. ಇದು ಯಂತ್ರದ ರೆಕ್ಕೆಗಳು ಹೆಚ್ಚು ತಿರುಗುವಂತೆ ಮಾಡುತ್ತದೆ. ಚಕ್ರಗಳಿಗೆ ಅಳವಡಿಸಲಾಗಿರುವ ಡೈನಮೋದಲ್ಲಿ ಉತ್ಪತ್ತಿಯಾದ ವಿದ್ಯುತ್‌ಚ್ಛಕ್ತಿಯು ಬ್ಯಾಟರಿಯಲ್ಲಿ ಸಂಗ್ರಹವಾಗುತ್ತದೆ. ಇಲ್ಲಿಂದ ಎ.ಸಿ. ವಿದ್ಯುತ್ ಡಿ.ಸಿ. ಯಾಗಿ ಪರಿವರ್ತನೆಯಾಗುತ್ತದೆ. ಈ ವಿದ್ಯುತ್ತಿನಿಂದ ಸಿದ್ದಪ್ಪ ಮತ್ತು ಅವರ ಸಹೋದರ ಮನೆಯಲ್ಲಿ ಸೇರಿ ಆರು 60 ವೋಲ್ಟ್ ಲೈಟುಗಳು ಬೆಳಗುತ್ತವಲ್ಲದೇ, ಟೇಪ್‌ರೆಕಾರ್ಡರ್ ಮತ್ತು ರೇಡಿಯೋ ಚಾಲನೆಗೆ ಕೂಡ ಬಳಸಿಕೊಳ್ಳುತ್ತಾರೆ. ಗಾಳಿಯು ಹೆಚ್ಚಿಗೆ ಬೀಸುತ್ತಲಿದ್ದು ಹೆಚ್ಚು ವಿದ್ಯುತ್ ಉತ್ಪಾದನೆಯಾಗುತ್ತಿದ್ದರೆ ಟಿ.ವಿ. ಕೂಡಾ ಚಾಲನೆಯಾಗುತ್ತದೆ.

ಸಿದ್ದಪ್ಪನವರು 16 ಎಕರೆ ಭೂಮಿಯನ್ನು ಹೊಂದಿದ್ದು ಮೆಕ್ಕೆಜೋಳ, ಗೋಧಿ, ಹೆಸರುಕಾಳು ಮತ್ತು ಹತ್ತಿಯನ್ನು ಬೆಳೆಯುತ್ತಾರೆ. ತಮ್ಮ ಟ್ರಾಕ್ಟರ್ ಮತ್ತು ತಮ್ಮ ಮಕ್ಕಳ ಸೈಕಲ್ಲುಗಳನ್ನು ತಾವೇ ರಿಪೇರಿ ಮಾಡಿಕೊಳ್ಳುತ್ತಾರೆ. ಇವರು ಒಂದು ಸಾಲು ಉಳುಮೆ ಮಾಡುವ ನೇಗಿಲನ್ನು 3 ಸಾಲು ಉಳುಮೆ ಮಾಡುವ ನೇಗಿಲಾಗಿ ಮಾರ್ಪಡಿಸಿದ್ದಾರೆ. ಒಬ್ಬರೇ ನಿರ್ವಹಿಸಬಹುದಾದ ಈ ಸಾಧನದ ಕಾರ್ಯವು ಮೂರು ಜನರು ಮಾಡುವ ಕೆಲಸಗಳಿಗೆ ಸಮ ನಾಗಿದೆ. ಸೈಕಲ್ಲಿನ ಚಕ್ರಗಳನ್ನು ತಿರುಗಿಸಿ ಬೈಸಿಕಲ್ಲಿನ ಡೈನಮೊದಿಂದ ಮೊಬೈಲಿನ ಬ್ಯಾಟರಿಗಳಿಗೆ ಚಾರ್ಜ ಮಾಡಿಸುವ ಸಧ್ಯತೆಯನ್ನೂ ಸಾಕಾರಗೊಳಿಸಿದ್ದಾರೆ. *ಹೆಚ್ಚಿನ ಮಾಹಿತಿಗಾಗಿ ಸಿದ್ದಪ್ಪನವರನ್ನು 9902221933ಗೆ ಸಂಪರ್ಕಿಸಬಹುದು.*

ತೆಂಗಿನಕಾಯಿ ತುರಿಮಣೆ

ಸಾಗರದ ಸಾಲಿಗ್ರಾಮದ ವೆಂಕಟ್ರಮಣ ಉಪಾಧ್ಯಾಯರು ಪುಟ್ಟದಾದ ಹೆರೆಮಣೆಯೊಂದನ್ನು ತಯಾರಿಸಿದ್ದಾರೆ. ಇದನ್ನು ಮೇಜಿನ ಮೇಲೆ, ಕಪಾಟಿನ ಹಲಗೆ ಅಥವಾ ಅಡುಗೆಯ ಕಟ್ಟೆಯ ಮೇಲೆ ಇಟ್ಟು ಉಪಯೋಗಿಸುವ ಹಾಗೆ ರಚನೆ ಮಾಡಿದ್ದಾರೆ. ನಿಂತು ಕೆಲಸ ಮಾಡುವ ಸಾಧ್ಯತೆ ಇರುವುದರಿಂದ ಬೆನ್ನು, ಸೊಂಟ, ಮಂಡಿ ನೋವಿನವರಿಗೆ ಸಹಾಯಕ. ಕೇವಲ ಹನ್ನೊಂದು ಇಂಚು ಉದ್ದ, ಮೂರು ಇಂಚು ಅಗಲವಿರುವುದರಿಂದ ಇಡಲು, ಸಾಗಿಸಲು ಅನುಕೂಲ. ಮಣೆಯ ಮುಂಗಾಲು ಮೇಜಿನ ಮೇಲೆ, ಹಿಂಗಾಲು ಅಂಚಿನ ಹೊರಗೆ ಇರುವಂತೆ ಮೇಜಿನ ಮೇಲಿಡಬೇಕು. ಹಿಂಗಾಲಿನ ಒಳಮೈಯಲ್ಲಿ ಗಟ್ಟಿ ರಬ್ಬರಿನ ಕಚ್ಚುಗಳಿವೆ. ಅವುಗಳಲ್ಲೊಂದು ಮೇಜಿನ ಹಲಗೆ ಕಚ್ಚಿಕೊಂಡಿರುವಂತೆ ತೊಡೆಯಿಂದ ಒತ್ತಿ ಹಿಡಿದುಕೊಂಡರೆ ಸುಲಭವಾಗಿ ಕಾಯಿಯನ್ನು ತುರಿಯ ಬಹುದು. ಉತ್ಕೃಷ್ಟ ಉಕ್ಕನ್ನು ಹೆರೆಬಾಯಿಯಾಗಿ ಮತ್ತು ಅಕೇಸಿಯಾ ಮರದ ಬೊಡ್ಡೆಗಳಿಂದ ಮಣೆ ಕೆತ್ತಿದ್ದಾರೆ.

ಮೂಲ – ಉದಯವಾಣಿ, ಸೋಮವಾರ, 28 ಜುಲೈ 2008.

ಗದಗಯ್ಯನವರ ಅನುಶೋಧನೆಗಳು

ವಿಜಾಪುರ ಜಿಲ್ಲೆಯ, ಬಸವನ ಬಾಗೇವಾಡಿ ತಾಲೂಕಿನ ಯಳವಾರ ಗ್ರಾಮದವರಾದ ಗದಗಯ್ಯ ಹಿರೇಮಠರವರು (65 ವರ್ಷ) ಬಿ.ಎ. ಪದವಿಯವರೆಗೆ ಓದಿದ್ದು ದೇಶೀ ತಂತ್ರಜ್ಞಾನ ಬಳಸಿ ಮನೆಯಲ್ಲಿಯೇ ಹಲವು ಕೃಷಿ ಯಂತ್ರೋಪಕರಣಗಳನ್ನು ತಯಾರಿಸಿದ್ದಾರೆ. ಅವರು ತಯಾರಿಸಿರುವ ಕೆಲವು ಕೃಷಿ ಯಂತ್ರೋಪ ಕರಣಗಳ ವಿವರಗಳನ್ನು ಇಲ್ಲಿ ಕೊಡಲಾಗಿದೆ.

ಎತ್ತಿನ ಕೂರಿಗೆ -

ಗದಗಯ್ಯನವರು ಪ್ರಥಮ ಬಾರಿಗೆ ಅಂದರೆ 1986 ರಲ್ಲಿ ತಯಾರಿಸಿರುವ ಯಂತ್ರ ಇದಾಗಿದೆ. ಇದರಿಂದ ಜೋಳವನ್ನು ಬಿತ್ತಲಾಗುತ್ತಿತ್ತು. ಆಗಿನ ರಾಜ್ಯ ಕೃಷಿ ಮಂತ್ರಿಗಳಾದ ಶ್ರೀ ಎಂ.ಪಿ. ಪ್ರಕಾಶ್ ಹಾಗೂ ಸಿಂದಗಿ ಶಾಸಕರಾದ ಮಲ್ಲನಗೌಡ ಬಿರಾದಾರ ಅವರ ಮೆಚ್ಚುಗೆಯನ್ನು ಇದು ಪಡೆದಿದೆ. ಈ ಕೂರಿಗೆಯನ್ನು ಬಹಳಷ್ಟು ರೈತರು ಉಪಯೋಗಿಸಿ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರಲ್ಲದೆ, ಒಣ ಬೇಸಾಯದಲ್ಲಿ ಇತರ ಬೆಳೆಗಳನ್ನು ಸಹ ಬಿತ್ತುವ ಕೂರಿಗೆಯ ಬೇಡಿಕೆಯನ್ನು ಮುಂದಿಟ್ಟಿದ್ದರು. ಅವರ ಬೇಡಿಕೆಯಂತೆ 1989 ರಲ್ಲಿ ಗದಗಯ್ಯನವರು ಜೋಳ , ಕಡಲೆ, ಗೋಧಿಯನ್ನು ಬಿತ್ತುವ ಕೂರಿಗೆಯನ್ನು ತಯಾರಿಸಿ ಅದನ್ನು ಧಾರಾವಾಡ ಕೃಷಿ ಮೇಳದಲ್ಲಿ ಪ್ರದರ್ಶಿಸಲಾಯಿತು.


ಈ ಕೂರಿಗೆಯನ್ನು ಕಾಳಿನಿಂದ ಕಾಳಿಗೆ ನಿರ್ದಿಷ್ಟವಾದ ಅಂತರವನ್ನು ಕಾಪಾಡುವಂತೆ ತಯಾರಿಸಲಾಗಿದ್ದು ಜಿಲ್ಲೆಯ ಅನೇಕ ರೈತರು ಇದರ ಉಪಯೋಗವನ್ನು ಪಡೆದುಕೊಂಡಿದ್ದಾರೆ. ಈ ಕೂರಿಗೆಯಲ್ಲೇ ಅನೇಕ ಬದಲಾವಣೆಗಳನ್ನು ಮಾಡಿ 35 ಕೆ.ಜಿ.ಯ ಬಿತ್ತುವ ಎತ್ತಿನ ಕೂರಿಗೆಯನ್ನು ತಯಾರಿಸಿದ್ದಾರೆ.

35 ಕೆ.ಜಿ.ಯ ಬಿತ್ತುವ ಕೂರಿಗೆ -

35 ಕೆ.ಜಿ. ಭಾರದ ಅತ್ಯಂತ ಹಗುರವಾದ ಕೂರಿಗೆಯನ್ನು ಕಬ್ಬಿಣದಿಂದ ತಯಾರಿಸಿದ್ದು ಎಲ್ಲಾ ತರಹದ ಬೀಜಗಳನ್ನು ಅಂದರೆ ಎಳ್ಳು, ಉಳ್ಳಾಗಡ್ಡಿ, ಮೆಣಸಿನಕಾಯಿ, ಗೋಧಿ, ಜೋಳ, ಕಡಲೆ, ಔಡಲ ಬೀಜಗಳನ್ನು ಬಿತ್ತಲು ತಯಾರಿಸಲಾಯಿತು. ಎತ್ತು ಎಳೆಯಲಿಕ್ಕೆ ಸುಲಭ ಮತ್ತು 8 ತಾಸಿನಲ್ಲಿ ಸಾಮಾನ್ಯ ಎತ್ತುಗಳಿಂದ 5 ಎಕರೆ ಹಾಗು ಬಲವಾದ ಎತ್ತುಗಳಿಂದ 5 ರಿಂದ 10 ಎಕರೆ ಬಿತ್ತಬಹುದು. ಬೀಜಗಳು ತಮ್ಮಷ್ಟಕ್ಕೆ ತಾವೇ ಬೀಳುತ್ತವೆ. ಗೊಬ್ಬರವನ್ನು ಕೈಯಿಂದ ಬಿತ್ತಬೇಕು. ಇದರಲ್ಲಿ ಕಾಳಿನಿಂದ ಕಾಳಿಗೆ ಬದಲಾವಣೆ ಮಾಡಲು ಮತ್ತು ಸಾಲಿನಿಂದ ಸಾಲಿಗೆ ಅಂತರವನ್ನು ಹೆಚ್ಚು ಕಡಿಮೆ ಮಾಡಲು ಬರುತ್ತದೆ. ಕಾಳಿನಿಂದ ಕಾಳಿಗೆ ನಿರ್ದಿಷ್ಟವಾದ ಅಂತರವಿರದಿದ್ದರೂ ಜೋಡು ಕಾಳು ಬೀಳುವುದಿಲ್ಲ. ನೂರಾರು ಜನ ರೈತರು ಇದರ ಉಪಯೋಗ ಪಡೆದಿದ್ದಾರೆ. ರೈತರು ಇದರ ಬಗ್ಗೆ ಹೆಮ್ಮೆಯಿಂದ ಹೇಳುವುದೇನೆಂದರೆ ಇದರಲ್ಲಿ ಬಿತ್ತಿದರೆ ಎಕರೆಗಳಲ್ಲಿನ ಸಸಿಗಳ ಸಂಖ್ಯೆ ಕಾಪಾಡಿಕೊಳ್ಳಲು ಸಹಾಯವಾಗಿದ್ದು, ಇಳುವರಿ ಹೆಚ್ಚು ಪಡೆಯಬಹುದು. ಅತ್ಯಂತ ಹಗುರವಾಗಿದ್ದು ಎತ್ತುಗಳಿಗೂ ಹಾಗೂ ಕೆಲಸದವರಿಗೂ ಯಾವುದೇ ಕಷ್ಟವಾಗುವುದಿಲ್ಲ.

ಟ್ರಾಕ್ಟರ್ ಕೂರಿಗೆ -

ಟ್ರಾಕ್ಟರ್ ಸಹಾಯದಿಂದ ಬೀಜ, ಗೊಬ್ಬರ ಹಾಗು ಮೇಲು ಕುಂಟೆಯನ್ನು ತಯಾರಿಸಲಾಗಿದೆ. ಇದು ಪೂರ್ತಿ ಕಬ್ಬಿಣದಿಂದ ಮಾಡಲ್ಪಟ್ಟಿದ್ದು 3 ಕ್ವಿಂಟಾಲ್ ಭಾರವಿದೆ. ಒಣ ಬೇಸಾಯದ ಎಲ್ಲಾ ತರಹದ ಬೀಜಗಳನ್ನು ಬಿತ್ತಬಹುದು. ಇದು ಎಲ್ಲಾ ಮಾದರಿಯ ಮತ್ತು ಎಲ್ಲಾ ಕಂಪನಿಯ 25 ಎಚ್.ಪಿ.ಯಿಂದ 50 ಎಚ್.ಪಿ.ವರೆಗಿನ ಟ್ರಾಕ್ಟರ್‌ಗಳಿಗೆ ಹೊಂದಾಣಿಕೆ ಆಗುವುದು. 4 ಎಕರೆ ಬಿತ್ತಲು ಒಂದು ಮುಕ್ಕಾಲು ಗಂಟೆಯಿಂದ ಎರಡು ಕಾಲು ಗಂಟೆ ಸಮಯ ತಗಲುವುದು. ತಾಳುಗಳಿಗೆ ಸ್ಪ್ರಿಂಗ್ ಅಳವಡಿಸಲಾಗಿದ್ದು, ತಾಳಿನಿಂದ ತಾಳಿಗೆ ಅಂತರವನ್ನು ಹೆಚ್ಚು ಕಡಿಮೆ ಮಾಡಬಹುದಾದ ಮತ್ತು ಹಿಂದೆ ಸಾಲು ಮುಚ್ಚಲು



ಇಂಗ್ಲೀಷ್ 'ವಿ' ಆಕಾರದ ಕುಂಟೆಯನ್ನು ಜೋಡಿಸಿರುವುದರಿಂದ ಕಳೆ ಸಿಕ್ಕಿಕೊಳ್ಳುವ ಸಂಭವವಿರುವುದಿಲ್ಲ. ಸ್ಪ್ರಿಂಗ್ ಅಳವಡಿಸಿದ ಕಾರಣ ಭೂಮಿಯ ಏರಿಳಿತವನ್ನು ಕಾಯ್ದುಕೊಳ್ಳುತ್ತದೆ. ಕಾಳಿನಿಂದ ಕಾಳಿಗೆ ನಿರ್ದಿಷ್ಟವಾದ ಅಂತರವಿರದಿದ್ದರೂ ಜೋಡು ಕಾಳು ಬೀಳುವುದಿಲ್ಲ. ಈ ಕೂರಿಗೆ ವಿಜಾಪುರ, ರಾಯಚೂರ್ ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿ ಅತ್ಯಂತ ಜನಪ್ರಿಯವಾಗಿದ್ದು, ನೂರಾರು ರೈತರು ಇದರ ಉಪಯೋಗ ಪಡೆದಿರುತ್ತಾರೆ.

ಕೃಷಿ ಬೈಕ್ ಟ್ರೈಲರ್‌ಗಳು

ಬೆಳ್ತಂಗಡಿ ತಾಲೂಕಿನ ಮೊಗ್ರುಗ್ರಾಮದ ಉದಯಶಂಕರ ಅವರು ತಮ್ಮ ಬೈಕನ್ನು ಕೇವಲ ಓಡಾಡಲಿಕ್ಕೆ ಬಳಸಿಕೊಳ್ಳದೇ ಅದಕ್ಕೆ ಟ್ರೈಲರ್ ಅಳವಡಿಸಿ ಬೇಸಾಯದ ಬಳಕೆಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇವರು ಎರಡೂವರೆ ಎಕರೆ ತೋಟವನ್ನು ಹೊಂದಿದ್ದು ಕೃಷಿ ಕಾರ್ಮಿಕರ ಕೊರತೆಯ ತೀವ್ರತೆಗೆ ಪರಿಹಾರ ಕಂಡುಕೊಂಡಿದ್ದಾರೆ. ಅವರ ಈ ಸಾಧನೆಯಲ್ಲಿ ಭಾಗಿಯಾದವರು ಉಪ್ಪಿನಂಗಡಿಯ ಲೇತ್ ಕೆಲಸಗಾರ ವಿಶ್ವನಾಥ. ಜೀಪುಗಳಲ್ಲಿ ಟ್ರೈಲರ್ ಬಳಕೆಯನ್ನು ಗಮನದಲ್ಲಿಟ್ಟುಕೊಂಡು ತಮ್ಮ ಸೂರಜ್ ಬೈಕಿಗೆ ತಕ್ಕದಾದ ಪುಟ್ಟ ಟ್ರೈಲರನ್ನು ಅಳವಡಿಸಿದ್ದಾರೆ. ಟ್ರೈಲರನ್ನು ತಯಾರಿಸಲು ಕಬ್ಬಿಣದ ಯಾಂಗಲ್, ಬುಲೆಟ್ ಗಾಡಿಯ ಚಕ್ರ, ತಳದಲ್ಲಿ ಕಟ್ಟಿಗೆಯ ಹಲಗೆ, ಬದಿಗಳಲ್ಲಿ ಪ್ಲೇವುಡ್ ಬಳಕೆ ಹಾಗು ಮುಂಬದಿಗೆ ಒಂದು ಕೊಂಡಿ ಬಳಸಲಾಗಿದೆ. ಹಾಗೆ ಕೃಷಿಗೆ ಬೈಕನ್ನು ಬಳಸಿಕೊಳ್ಳುವ ಸಮಯದಲ್ಲಿ ಟ್ರೈಲರ್‌ನ ಮುಂಬದಿಯ ಕೊಂಡಿಯನ್ನು ಬೈಕ್‌ನ ಹಿಂಬದಿಗೆ ಜೋಡಿಸಲಾಗುತ್ತದೆ. ಕಿರಿದಾದ ರಸ್ತೆಗಳಲ್ಲಿ ಸರಾಗವಾಗಿ ಚಲಿಸುವ ಹಾಗೆ ವಿನ್ಯಾಸ ಮಾಡಿದ್ದಾರೆ. ಕಬ್ಬಿಣ ಅಥವಾ ಪ್ಲಾಸ್ಟಿಕ್ ಶೀಟ್‌ಗಳನ್ನು ಬಳಸಿದರೆ ಗೊಬ್ಬರದಂತಹ ತೇವಯುಕ್ತ ಪದಾರ್ಥಗಳನ್ನು ಸಾಗಿಸಬಹುದು. ಸುಮಾರು ಒಂದು ಕ್ವಿಂಟಾಲ್ ಬೆಳೆಯನ್ನು ತರಲು ಇದರಿಂದ ಸಾಧ್ಯವಂತೆ.

ಇವರ ಬೈಕ್ ಡೀಸೆಲ್ ಬೈಕ್ ಆಗಿರುವುದರಿಂದ ಮತ್ತು ಟ್ರೈಲರಿಗೆ ಪ್ರತ್ಯೇಕ ಬ್ರೇಕ್ ಇಲ್ಲದ ಕಾರಣ ದಿಬ್ಬಗಳನ್ನು ಏರಿಳಿಯುವಾಗ ಎಚ್ಚರಿಕೆ ವಹಿಸಬೇಕು. ಗಾಡಿ ಬಂದ್ ಆದರೆ ತಕ್ಷಣ ಸ್ಟಾರ್ಟ್ ಮಾಡುವುದೂ ಕಷ್ಟ. ಟ್ರೈಲರಿಗೆ ಎರಡೇ ಚಕ್ರಗಳಿರುವುದರಿಂದ ಅದರ ಮುಂಭಾರವೆಲ್ಲಾ ಬೈಕಿನ ಹಿಂದೆ ಬೀಳುತ್ತದೆ. ಹಾಗಾಗಿ ಏರಿನಲ್ಲಿ ಬೈಕ್‌ನ ಮುಂಭಾಗದ ಚಕ್ರ ಮೇಲೆತ್ತಬಹುದು. 100, 180 ಸಿ.ಸಿ. ಬೈಕುಗಳಿಗೆ ಟ್ರೈಲರ್ ಎಳೆಯುವುದು ಸ್ವಲ್ಪ ಕಷ್ಟವಾಗಬಹುದು. ಈ ನ್ಯೂನತೆಗಳನ್ನು ಸರಿಪಡಿಸಲು ಬುಲ್ಲೆಟ್‌ನಂತಹ ಪೆಟ್ರೋಲ್ ಬೈಕ್ ಬಳಸಿದರೆ ಹೆಚ್ಚು ಉತ್ತಮ ಎನ್ನಲಾಗಿದೆ. ಆಟೋ ಸ್ಟಾರ್ಟರ್ ಅಳವಡಿಸಿಕೊಳ್ಳಬಹುದು. ಟ್ರೈಲರ್‌ಗೆ ಮುಂದೆ ಮೂರನೇ ಚಕ್ರ ಮತ್ತು ಚಿಕ್ಕ ಶಾಕ್ ಅಬ್ಸರ್ವರ್ ಜೋಡಿಸಿದರೆ ಬೈಕ್ ಮೇಲೆ ಒತ್ತಡ ಕಡಿಮೆಯಾಗುತ್ತದೆ ಎಂಬುದು ಉದಯಶಂಕರರ ಅಭಿಪ್ರಾಯವಾಗಿದೆ.

ಮೂಲ - ವಿಜಯಕರ್ನಾಟಕ, ಬುಧವಾರ, ಮೇ 7, 2008

ಹಸುಗಳ ಉಣ್ಣೆಗಳಿಗೆ ಪರಿಹಾರ

ತಮಿಳು ನಾಡಿನ ಜನರು ಹಸುಗಳ ಮೈಮೇಲೆ ಇರುವಂತಹ ಉಣ್ಣೆಗಳಿಗೆ ಹುರಗಲು (*Chloroxylon swietenia Dc.*) ಮರದ ಎಲೆಗಳು ಅಥವಾ ತೊಗಟೆ, ಒಡತೆರೆ (ವಡುವಾರದ ಗಿಡ) (*Dichrostachys cinerea L.*) ಮತ್ತು ಚಿಲಕಧೂಪ (ಮಡ್ಡಿಮರ) (*Boswellia serrata (Colebr.)* ಇವುಗಳನ್ನು ಮಿಶ್ರಣಮಾಡಿ ಧೂಪ ಹಾಕುತ್ತಾರೆ. ಈ ವಿಧಾನವನ್ನು ಹುಣ್ಣಿಮೆಯ ದಿನದಂದು ಮಾತ್ರ ಮಾಡಲಾಗುತ್ತದೆ ಎಂಬುದು ಇಲ್ಲಿನ ಸ್ಥಳೀಯರ ನಂಬಿಕೆ. ಅಲ್ಲದೆ ಚಿಲಕಧೂಪ ಮರದಿಂದ ಸ್ರವಿಸಿದಂತಹ ಅಂಟನ್ನು ಊದಿನ ಕಡ್ಡಿ ತಯಾರಿಕೆಯಲ್ಲಿ ಅಥವಾ ಪರಿಮಳಕ್ಕಾಗಿ ಉಪಯೋಗಿಸಲಾಗುತ್ತದೆಯಂತೆ.


(ವೈಜ್ಞಾನಿಕ ಹಿನ್ನಲೆ : ಹುರಗಲು ಮರದ ಎಲೆಗಳಿಂದ ಮತ್ತು ತೊಗಟೆಯಿಂದ ಬೇರ್ಪಡಿಸಿರುವಂತಹ ಅಂಶವು ಕೀಟನಾಶಕವಾಗಿ ಕೆಲಸಮಾಡುತ್ತದೆ. ವಿವರಕ್ಕೆ Ravi kiran, S Reddy, A.shiva Devi and P Sita, Bioresource Technology. Volume 97 (18): pages 2481 - 2484, 2006 ನೋಡಿರಿ) ಚಿಲಕಧೂಪ ಅಂಟಿನಲ್ಲಿರುವ ಅಂಶವು ಮರಿಕೀಟಗಳ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ವಿವರಕ್ಕೆ Dennis TJ, Akshay Kumar K, Srimannarayana G, Raghunatharao D, Fitoterapia, 70(3): 308-310, 1999 ನೋಡಿರಿ)

ಇದೇ ರೀತಿ ಕೋಳಿಗಳಲ್ಲಿ ಕಾಣಿಸಿಕೊಳ್ಳುವ ಹೇನುಗಳ ಪರಿಹಾರವಾಗಿ, ಹುರಗಲು ಮರದ ಎಲೆಗಳನ್ನು ಕೋಳಿ ಗೂಡುಗಳ ಹತ್ತಿರ ಬೆಂಕಿ ಮಾಡಿಕೊಂಡು ಅದರಲ್ಲಿ ಹಾಕಬೇಕು. ಇದರಿಂದ ಹೊಗೆಯು ಉತ್ಪತ್ತಿಯಾಗುತ್ತದೆ. ಈ ಹೊಗೆಯು ಹೇನುಗಳ ಸಾವಿಗೆ ಕಾರಣವಾಗುತ್ತದೆ ಎಂದು Honey Bee, ಸಂಪುಟ 10(2):8, 1999 ರಲ್ಲಿ ತಿಳಿಸಲಾಗಿದೆ.

ಮೂಲ: Honey Bee, Vol 19(1), January - March 2008

ಹೊರ ಬಂದಿರುವ ಗರ್ಭಕೋಶದ ಚಿಕಿತ್ಸೆ

60ವರ್ಷದ ಹೀರಾಬೆನ್‌ರವರು ಗುಜರಾತಿನ, ಸಬರಕಾಂತ ಜಿಲ್ಲೆಯವರಾಗಿದ್ದಾರೆ. ಹೈನುಗಾರಿಕೆ ಜೊತೆಗೆ ಪಶುವೈದ್ಯಕೀಯ ಇವರ ಕಸುಬಾಗಿದೆ.




ಸಾಂಪ್ರದಾಯಕವಾಗಿ ಬಂದಿರುವಂತ ಈ ವಿದ್ಯೆಯನ್ನು ಹಲವು ವರ್ಷಗಳಿಂದ ಜಾನುವಾರುಗಳಿಗೆ ನೀಡುತ್ತಿದ್ದಾರೆ. ಹೊರ ಬಂದಿರುವ ಗರ್ಭಕೋಶದ ಚಿಕಿತ್ಸೆಗಾಗಿ ಹೀರಾಬೆನ್‌ರವರು ಎರಡು ಅಥವಾ ಮೂರು ಲೀಟರ್ ನೀರಿನಲ್ಲಿ 500 ಗ್ರಾಂ ಕಾಡು ನೀಲಿ (*natural blue dye, Indigofera tinctoria L.*)ಯನ್ನು ಮಿಶ್ರಣ ಮಾಡುತ್ತಾರೆ. ಈ ಮಿಶ್ರಣವನ್ನು ದಿನಕ್ಕೆ ಒಂದು ಲೀಟರ್‌ನಂತೆ ಮೂರು ದಿನಗಳು ಕೊಡುತ್ತಾರೆ. ಪ್ರತಿದಿನ ಎರಡು ವಾರಗಳವರೆಗೆ ಒಂದೂವರೆ ಕೆ.ಜಿ.ಯಷ್ಟು ಉದ್ದಿನಕಾಳುಗಳನ್ನು ರಾತ್ರಿ ಪೂರ್ತಿ ನೀರಿನಲ್ಲಿ ನೆನೆಸಿ ಮೇವಿನ ಜೊತೆ ಕೊಡುತ್ತಾರೆ. ಈ ರೀತಿ ಮಾಡುವುದರಿಂದ ಮತ್ತೆ ಗರ್ಭಾಶಯವು ಹೊರಬರದಂತೆ ತಡೆಯಬಹುದು ಎಂದು ಹೀರಾಬೆನ್‌ರವರು ಹೇಳಿದ್ದಾರೆ.

(ವೈಜ್ಞಾನಿಕ ಹಿನ್ನಲೆ : ಕಾಡು ನೀಲಿಯನ್ನು ಗರ್ಭಾಶಯದ ಶಸ್ತ್ರಚಿಕಿತ್ಸೆಯಾದ ಮೇಲೆ ಮೂತ್ರನಾಳದ ರಕ್ಷಣೆಗಾಗಿ ಉಪಯೋಗಿಸಲಾಗುತ್ತದೆ. ವಿವರಕ್ಕೆ Graziano S, Hoyte L, Vilich F, Brubaker L. (2005). Int Urogynecol J Pelvic Floor Dysfunct. Volume 16(5) : pages 418-9ನೋಡಿರಿ)

ಎಮ್ಮೆಗಳಲ್ಲಿ ಗರ್ಭಪಾತ ನಿಯಂತ್ರಣ

ಗುಜರಾತಿನ, ಜುನಾಗಡ್ ಜಿಲ್ಲೆಯ ಮೊಹಮ್ಮದ್‌ಭಾಯಿ (45 ವರ್ಷ) ಯವರು ಕೃಷಿ ಕಾರ್ಮಿಕರಾಗಿದ್ದು, ಜಾನುವಾರುಗಳಿಗೂ ಚಿಕಿತ್ಸೆಯನ್ನು ಕೊಡುತ್ತಾರೆ. ಎಮ್ಮೆಗಳಲ್ಲಿ ಪದೇ ಪದೇ ಗರ್ಭಪಾತವಾಗುತ್ತಿದ್ದರೆ ಅದು ಹಾಲು ಕರೆಯಲು ಅಶಕ್ತವಾಗುತ್ತದೆ. ಇದರಿಂದ ಸಾಕಣೆದಾರರಿಗೆ ಆರ್ಥಿಕ ನಷ್ಟ ಉಂಟಾಗುತ್ತದೆ. ಇದಕ್ಕೆ ಪರಿಹಾರವಾಗಿ ಮೊಹಮ್ಮದ್ ಭಾಯಿಯವರು ಗರ್ಭಪಾತವನ್ನು ತಡೆಯಲು ಬಾಳೆಯ ದಿಂಡನ್ನು ಉಪಯೋಗಿಸುತ್ತಾರೆ. ಇವರು ಬಾಳೆಯ ದಿಂಡನ್ನು ಚಿಕ್ಕದಾಗಿ ಕತ್ತರಿಸಿ ಮೇವಿನ ಜೊತೆಯಲ್ಲಿ ಎಮ್ಮೆಗಳಿಗೆ ತಿನ್ನಲು ಕೊಡುತ್ತಾರೆ.



(ವೈಜ್ಞಾನಿಕ ಹಿನ್ನಲೆ : ಕೊಬ್ಬಿನ ವಿಭಜನೆಯ ರಸಾಯನಿಕ ಕ್ರಿಯೆಯಲ್ಲಿ ಸಹಾಯವಾಗುವ ಬಾಳೆಯು (Musaparadisiaca) ಗರ್ಭಧಾರಣೆಯ ಹಾರ್ಮೋನುಗಳ ಮೇಲೆ ಮುಖ್ಯಪಾತ್ರ ವಹಿಸುತ್ತದೆ ಎಂದು ತಿಳಿದುಬಂದಿದೆ. ವಿವರಕ್ಕೆ Usha V, Vijammala PL, Kurup PA. (1984) Indian J Exp Biol. Volume 22(10):pages 550-4 ನೋಡಿರಿ)

ಮೂಲ: Honey Bee Vol 20(1) January - March 2009

ಹಸುಗಳ ಕಾಲು ಊತಕ್ಕೆ


ಮಳೆಗಾಲದಲ್ಲಿ ಹಸುಗಳ ಹಿಂಬದಿಯ ಮೊಣಕಾಲಿನಲ್ಲಿ ಊತವು ಕಾಣಿಸಿಕೊಂಡು ನಡೆದಾಡುವಾಗ ಅದರ ಮೇಲೆ ಒತ್ತಡ ಬಿದ್ದು ಶಬ್ದವು ಬರುತ್ತಿರುತ್ತದೆ. ಅಲ್ಲದೆ ಆ ಸ್ಥಳದಲ್ಲಿ ಜೀವಕೋಶಗಳು ಸತ್ತು ಹೋಗುತ್ತವೆ. ಈ ಸ್ಥಿತಿಗೆ ಒಳಗಾದಂತಹ ಹಸುಗಳು ನಡೆದಾಡಲು ಅಶಕ್ತವಾಗಿ ನೋವು ಮತ್ತು ಜ್ವರದಿಂದ ಬಳಲುತ್ತಿದ್ದು ಒಂದು ಅಥವಾ ಎರಡು ದಿನಗಳಲ್ಲಿ ಅಸುನೀಗುತ್ತವೆ. ಈ ಕಾಯಿಲೆಯು ಬ್ಯಾಕ್ಟೀರಿಯಾದಿಂದ ಬರುತ್ತದೆಯಂತೆ. ಇಂಥ ಕಾಯಿಲೆಯ ಲಕ್ಷಣಗಳನ್ನು ತಮಿಳುನಾಡಿನ ಈರೋಡ್ ಜಿಲ್ಲೆಯ, ತಮರಾಯ್‌ಕರಾಯ್ ಊರಿನ ಸೂರಪ್ಪನಾಯಕ್‌ರವರು ಗುರುತಿಸಿ ಅದಕ್ಕೆ ಚಿಕಿತ್ಸೆಯನ್ನು ಕೊಡುತ್ತಾರೆ. ಇವರು ಅಳಲೇಕಾಯಿಯ (*Terminalia chebula Retz.*) 20 ಬೀಜಗಳನ್ನು ಪುಡಿಮಾಡಿ ಸುಣ್ಣ, ಹರಳೆಣ್ಣೆ (*Ricinus communis L.*) ಮತ್ತು ಕಳ್ಳಿ (*Euphorbia tirucalli L.*) ಗಿಡದ ಹಾಲಿನೊಂದಿಗೆ ಮಿಶ್ರಣ ಮಾಡಿಕೊಂಡು ಚೂರ್ಣವನ್ನು ತಯಾರಿಸುತ್ತಾರೆ. ಈ ಚೂರ್ಣವನ್ನು ನೋವು ಆಗಿರುವಂತ ಸ್ಥಳಕ್ಕೆ ಲೇಪಿಸುತ್ತಾರೆ.

(ವೈಜ್ಞಾನಿಕ ಹಿನ್ನಲೆ : ಅಳಲೇಕಾಯಿ ಗಿಡವು ಸೂಕ್ಷ್ಮಾಣುಜೀವಿ ನಾಶಕ ಗುಣಗಳನ್ನು ಹೊಂದಿದೆ. ವಿವರಕ್ಕೆ Ahmad I, Mehmood Z, Mohammad F. 1998. Screening of some Indian medicinal plants for their antimicrobial properties. J Ethnopharmacol Sep;62(2):183-93ನೋಡಿರಿ. ಹರಳೆಣ್ಣೆಯು ಕೊಳೆಯುವ ಗುಣವನ್ನು ತಡೆಯುವುದಲ್ಲದೇ ಉರಿಯುವ ಗುಣವನ್ನು ಕಡಿಮೆಮಾಡುತ್ತದೆ. (Ilavarasan R, Mallika M, Venkataraman S. 2006). ಕಳ್ಳಿ ಗಿಡವು ಬ್ಯಾಕ್ಟೀರಿಯಾಗಳನ್ನು ನಾಶ ಮಾಡುವ ಗುಣವನ್ನು ಹೊಂದಿದೆ. ವಿವರಕ್ಕೆ Lirio L.G., Hermano M.L. and Fontanilla M.Q. 1998. Antibacterial activity of medicinal plants from the philippines. Pharmaceutical biology, 36(5):357-359 ನೋಡಿರಿ)

ಮೂಲ: Honey Bee Vol 19(1) January - March 2008

ಕಾಲು, ಬಾಯಿ ರೋಗಕ್ಕೆ ಚಿಕಿತ್ಸೆ

ಗುಜರಾತಿನ ವಡೋದರ ಜಿಲ್ಲೆಯ ಪೂಹಲಾಭಾಯಿ (32ವರ್ಷ)ಯವರಿಗೆ ವ್ಯವಸಾಯ ಮತ್ತು ಹೈನುಗಾರಿಕೆ ಮುಖ್ಯ ಕಸುಬುಗಳಾಗಿವೆ. ಇವರು ಜಾನುವಾರುಗಳಿಗೆ ಬರುವ ಕಾಲು, ಬಾಯಿ ರೋಗಕ್ಕೆ ಚಿಕಿತ್ಸೆಯ ವಿಧಾನವನ್ನು ತಮ್ಮ ಹಳ್ಳಿಯಲ್ಲಿರುವ ಹಿರಿಯರಿಂದ ಕಲಿತಿರುವುದಾಗಿ ಹೇಳಿದ್ದಾರೆ. ಕಾಲು, ಬಾಯಿ ರೋಗದಿಂದ ನರಳುತ್ತಿರುವ ಜಾನುವಾರುಗಳಲ್ಲಿ ಕಾಲುಗಳು ಊದಿಕೊಂಡಿದ್ದು, ಗಾಯಗಳಾಗಿ ಅದರಿಂದ ರಕ್ತ ಸೋರುತ್ತಿರುತ್ತದೆ. ಗೊರಸುಗಳಲ್ಲಿ ಮತ್ತು ಬಾಯಿಯಲ್ಲಿ ಗುಳ್ಳೆಗಳಾಗಿ ನಂತರ ಕೀವುಗಳಿಂದ ಕೂಡುತ್ತವೆ. ಇಂತಹ ಗುಳ್ಳೆಗಳಲ್ಲಿ ಕೆಲವು ಬಾರಿ ಕ್ರಿಮಿಗಳೂ ಸೇರಿಹೋಗುತ್ತವೆ. ಈ ಕಾರಣದಿಂದ ಜಾನುವಾರುಗಳು ನಡೆಯಲು ಅಶಕ್ತವಾಗುತ್ತವೆ. ಪೂಹಲಭಾಯಿಯವರು ಈ ಕಾಯಿಲೆಯನ್ನು ಗುಣಪಡಿಸಲು ಮುತ್ತುಗ (*Butea manosperma (Lamk.)Taub.,*) ಗಿಡದ ಅಂಟನ್ನು ಬಳಸುತ್ತಾರೆ. ಇದರ ಅಂಟನ್ನು ಉರಿಯುತ್ತಿರುವ ಕಲ್ಲಿದ್ದಲಿನ ಮೇಲೆ ಹಾಕಿ ಬರುವಂತಹ ಹೊಗೆಯನ್ನು ಅಸ್ವಸ್ಥವಾಗಿರುವ ಜಾನುವಾರುಗಳು ಉಸಿರೆಳೆದುಕೊಳ್ಳುವಂತೆ ಮಾಡುತ್ತಾರೆ. ಈ ವಿಧಾನವನ್ನು ದಿನಕ್ಕೆ ಎರಡು ಬಾರಿಯಂತೆ 5-10 ದಿನಗಳವರೆಗೆ ಕೊಡುತ್ತಾರೆ.



(ವೈಜ್ಞಾನಿಕ ಹಿನ್ನೆಲೆ : ಮುತ್ತುಗ ಗಿಡದ ಅಂಟನ್ನು ಚರ್ಮದ ಗಾಯಗಳನ್ನು ಗುಣಪಡಿಸಲು ಉಪಯೋಗಿಸಲಾಗುತ್ತದೆ. ಹಾಗೆಯೇ ಅಂಟನ್ನು ಉರಿಯುತ್ತಿರುವ ಕಲ್ಲಿದ್ದಲಿನ ಮೇಲೆ ಹಾಕಿದಾಗ ಬರುವಂತಹ ಹೊಗೆಯಲ್ಲಿ ಕಾಲು, ಬಾಯಿ ರೋಗದ ವೈರಸ್‌ದಿಂದಾದ ನೋವು ಮತ್ತು ಬಾಹ್ಯ ಹುಣ್ಣುಗಳನ್ನು ಗುಣಪಡಿಸುವಂತಹ ಸಾಮರ್ಥ್ಯವಿರಬಹುದು ಎಂದು ದಾಖಲಾಗಿದೆ. ವಿವರಕ್ಕೆ Sumitra M, Manikandan P and Suguna L. (2005). Int J Biochem & Cell Biol. Volume 37 (3): pages 566 - 73 ನೋಡಿರಿ)

ಗಾಯಗಳಿಗೆ ಕಡಲೆಗಿಡ !

ಜಾನುವಾರುಗಳಿಗಾಗಿರುವ ಗಾಯಗಳನ್ನು ಸರಿಯಾಗಿ ಉಪಚರಿಸದಿದ್ದಾಗ ಅವುಗಳ ಒಳಗೆ ಹುಳುಗಳು ಸೇರಿ ಹೋಗುತ್ತವೆ. ಇಂಥ ಗಾಯಗಳ ಚಿಕಿತ್ಸೆಗಾಗಿ ಗುಜರಾತಿನ ವಡೋಧರ ಜಿಲ್ಲೆಯ ಜೆಡಿಬೆನ್‌ರವರು ಕಡಲೆಕಾಯಿ (*Cicer arietinum L.*) ಗಿಡವನ್ನು ಬೇರು ಸಹಿತ ರುಬ್ಬಿಕೊಳ್ಳುತ್ತಾರೆ. ಇದನ್ನು ಗಾಯಗಳ ಮೇಲೆ ಹಚ್ಚುತ್ತಾರೆ. ಈ ರೀತಿ ಮಾಡುವುದರಿಂದ ಹುಳಗಳು ಹೊರಬಂದು ಗಾಯಗಳು ಬೇಗ ಗುಣವಾಗುತ್ತದೆಯಂತೆ. ಈ ವಿಧಾನವನ್ನು ತಮ್ಮ ತಂದೆಯವರಿಂದ ಕಲಿತಿರುವುದಾಗಿ ಹೇಳಿದ್ದಾರೆ.

(ವೈಜ್ಞಾನಿಕ ಹಿನ್ನೆಲೆ : ಕಡಲೆಕಾಯಿ ಗಿಡದಲ್ಲಿ ಗಾಯಗಳನ್ನು ಗುಣಪಡಿಸುವಂತ ಅಂಶಗಳಿವೆ ಎಂದು ಈಗಾಗಲೇ ದಾಖಲಿಸಲಾಗಿದೆ .ವಿವರಕ್ಕೆ Patchell BJ, Wojcik KR, Yang TL, White SR, Dorscheid DR (2007) AmJ Physiol Lung Cell Mol Physiol.; Volume 293 (2): pages 354 - 63 ನೋಡಿರಿ)


ಮೂಲ: *Honey Bee Vol 20(1) January - March 2009*

ದನಗಳಿಗೆ ಹಾವಿನ ಕಡಿತಕ್ಕೆ

ಗುಲ್ಬರ್ಗಾ ಜಿಲ್ಲೆ, ಅಫಜಲಪುರ ತಾಲೂಕು, ಚಿಂಚೋಳಿಯ ಸಂಗಮೇಶ ಮುಗಳಿಯವರು ಹಸುಗಳಿಗೆ ಹಾವು ಅಥವಾ ವಿಷಜಂತುಗಳು ಕಚ್ಚಿದರೆ ಅದಕ್ಕೆ ಬಿಳಿಕಣಗಲು (*Wrightia tomentosa*) ಉಪಯೋಗಿಸಿಕೊಂಡು ಚಿಕಿತ್ಸೆಯನ್ನು ನೀಡುತ್ತಾರೆ. ಇದಕ್ಕಾಗಿ ಅವರು ಬಿಳಿಕಣಗಲು ಗಿಡದ ಒಂದು ಹಿಡಿ ಸೊಪ್ಪನ್ನು ಅರೆದು ಅದರ ರಸವನ್ನು ಹಾವು ಕಡಿದ ದನಗಳ ಮೂಗಿನಲ್ಲಿ ಹಿಂಡುತ್ತಾರೆ. ಉಳಿದ ಸೊಪ್ಪನ್ನು ಜೋಳದ ರೊಟ್ಟಿ ಅಥವಾ ಗೋಧಿ ಚಪಾತಿಗಳಲ್ಲಿ ಸುರುಳಿಸುತ್ತಿ ದನಗಳಿಗೆ ತಿನ್ನಿಸುತ್ತಾರೆ. ಇದರಿಂದ ಎಂತಹುದೇ ವಿಷವಾದರೂ ನಿವಾರಣೆಯಾಗುವುದಂತೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ *ಸಂಗಮೇಶ ಮುಗಳಿಯವರನ್ನು 9886012497ಗೆ ಸಂಪರ್ಕಿಸಬಹುದು.*

ಹೊಟ್ಟೆ ಉಬ್ಬರಕ್ಕೆ ಸಪೋಟಾ !

ಹೊಟ್ಟೆ ಉಬ್ಬರದಿಂದ ಬಳಲುತ್ತಿರುವ ಜಾನುವಾರುಗಳ ಹೊಟ್ಟೆಯ ಮೇಲೆ ನಿಧಾನವಾಗಿ ತಟ್ಟಿದರೆ ತಬಲದ ತರಹ ಶಬ್ದ ಕೇಳಿಸುತ್ತದೆ. ಇಂತಹ ಹಸುಗಳು ನಿರಾಸಕ್ತತೆಯಿಂದ ಕೂಡಿದ್ದು ಏನನ್ನು ತಿನ್ನಲು ಬಯಸುವುದಿಲ್ಲ. ಇಂತಹ ಜಾನುವಾರುಗಳಿಗೆ ಗುಜರಾತಿನ, ಜುನಾಗಡ್ ಜಿಲ್ಲೆಯ ವೀರ್‌ಮನ್‌ಭಾಯಿ (69 ವರ್ಷ)ಯವರು ಸಪೋಟ ಕಾಯಿಗಳನ್ನು ಉಪಯೋಗಿಸಿಕೊಂಡು ಚಿಕಿತ್ಸೆ ನೀಡುತ್ತಾರೆ. ಇದಕ್ಕಾಗಿ ಇವರು ಮೂರು ಸಪೋಟಾ ಕಾಯಿಗಳನ್ನು ತೆಗೆದುಕೊಂಡು ಚಿಕ್ಕದಾಗಿ ಕತ್ತರಿಸಿ ಒಂದು ಲೀಟರಿನ ನೀರಿನಲ್ಲಿ ಮಿಶ್ರಣ ಮಾಡಿ ಅರ್ಧಗಂಟೆ ಹಾಗೆಯೇ ಬಿಡುತ್ತಾರೆ. ನಂತರ ಈ ಮಿಶ್ರಣವನ್ನು ದಿನದಲ್ಲಿ ಎರಡು ಬಾರಿ ಕೊಡುತ್ತಾರೆ. ಇದರಿಂದ ಹಸುವಿಗೆ ಬೇಧಿಯಾಗಿ ಹೊಟ್ಟೆ ಉಬ್ಬರದಿಂದ ಬಿಡುಗಡೆ ಹೊಂದುತ್ತದೆ ಎಂದು ವೀರ್‌ಮನ್ ಭಾಯಿಯವರು ಹೇಳಿದ್ದಾರೆ. 6ನೇ ತರಗತಿಯವರೆಗೆ ಓದಿರುವ ಇವರು ಈ ವಿಧಾನವನ್ನು ತಮ್ಮ ತಂದೆಯವರಿಂದ ತಿಳಿದುಕೊಂಡಿದ್ದು, ಬಹಳ



ಹಿಂದಿನಿಂದಲೇ ಈ ಚಿಕಿತ್ಸೆಯನ್ನು ಜಾನುವಾರುಗಳಿಗೆ ಕೊಡುತ್ತಿದ್ದೇನೆ ಎಂದು ಹೇಳಿದ್ದಾರೆ.

(ವೈಜ್ಞಾನಿಕ ಹಿನ್ನಲೆ : ಸಪೋಟಾದಲ್ಲಿರುವ ಔಷಧೀಯ ಗುಣಗಳು ಅನ್ನನಾಳದಲ್ಲಿಯ ಹುಣ್ಣುಗಳನ್ನು ಗುಣಪಡಿಸುತ್ತದಲ್ಲದೆ, ಹೊಟ್ಟೆಯೊಳಗಿನ ಮೇಲ್ಪದರಿನ ರಕ್ಷಣೆಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ ಎಂದು ದಾಖಲಾತಿ ಇದೆ. ವಿವರಕ್ಕೆ Shah MB, Goswami SS, Santani DD. (2004) Phytotheraphy Res. Volume 18(10): pages 814-8 ನೋಡಿರಿ)

ಮೂಲ: *Honey Bee Vol 20(1) January - March 2009*

ಜೀವಶಾಸ್ತ್ರದ ಜೀವ 'ರೇಮನಿ'

ಮೇ ತಿಂಗಳ 10ನೆಯ ತಾರೀಖು. ಅಮೆರಿಕದ ನೇವಡದ 'ರೆನೊ' ದಲ್ಲಿ ಸಂಭ್ರಮದ ವಾತಾವರಣ. ಇನ್‌ಟೆಲ್ ಇಂಟರ್ ನ್ಯಾಶನಲ್ ಸೈನ್ಸ್ ಅಂಡ್ ಎಂಜಿನಿಯರಿಂಗ್ ಫೇರ್ 2009. ವಿವಿಧ ದೇಶಗಳ 1265 ಮಕ್ಕಳ ಪ್ರಯೋಗಗಳ ಸತ್ವ ಪರೀಕ್ಷೆ. 5 ಜನ ಪರಿಣಿತ ವಿದ್ವಾಂಸರು, ಸಾವಿರಾರು ಪ್ರೇಕ್ಷಕರ ಪ್ರಶ್ನೆಗಳಿಗೆ ಸೂಕ್ತ ಉತ್ತರ ಕೊಟ್ಟು ಎಲ್ಲರ ಮೆಚ್ಚುಗೆ ಪಡೆದು, ಪದಕ, ಪ್ರಶಸ್ತಿ ಪತ್ರದ ಜೊತೆಗೆ 550 ಡಾಲರ್‌ಗಳ ಬಹುಮಾನ ಪಡೆದು ಬಂದ ಮೋನಿಷ ಶಿವಾರಗುಡ್ಡದ ನವೋದಯ ಶಾಲೆಯ 9ನೇಯ ತರಗತಿಯ ವಿದ್ಯಾರ್ಥಿನಿ. ಈಕೆ ಮಾಡಿದ ಪ್ರಯೋಗ ಮುಟ್ಟಿದರೆ ಮುನಿ ಗಿಡದಿಂದ ರೈಜೋಬಿಯಂ ಪ್ರತ್ಯೇಕಿಸಿ, ಮೊಳಕೆ ಪ್ರಮಾಣ ಹೆಚ್ಚಿಸಿದ್ದು. (ವಿವರಕ್ಕೆ ಪುಟ 3 ನೋಡಿರಿ.)

ಶಾಲೆಯಲ್ಲೂ ಸಂಭ್ರಮದ ವಾತಾವರಣ. ಜೀವ ಶಾಸ್ತ್ರದ ಶಿಕ್ಷಕಿ ರೇಮನಿಯವರ ಮಾರ್ಗದರ್ಶನದಲ್ಲಿ ನಡೆದ ಈ ಪ್ರಯೊಗ, ವಿಮಾನದಲ್ಲಿ ಹಾರಿದ್ದಲ್ಲದೆ, ಪ್ರಶಸ್ತಿ ಗಳಿಸಿದ್ದು, ಈ ಸಂತಸಕ್ಕೆ ಕಾರಣವಾಗಿತ್ತು. ಈ ಪ್ರಶಸ್ತಿ ನವೋದಯ ಶಾಲೆಗೆ ದೊರೆಯುತ್ತಿರುವುದು 3ನೆಯ ಬಾರಿ. ಪರಿಸರ ಸ್ನೇಹಿಯಾದ ಈ ರೀತಿ ಪ್ರಯೋಗಗಳನ್ನು ಆಸಕ್ತ ಮಕ್ಕಳ ಕೈಲಿ ಮಾಡಿಸುವುದು ಜೀವಶಾಸ್ತ್ರದ ಅಧ್ಯಾಪಕಿ ರೇಮನಿಯವರ ಹವ್ಯಾಸ. 2005ರಲ್ಲಿ ಪಾರ್ಥೇನಿಯಂ ಉಪಯೋಗಿಸಿ ಬಯೋ ಪೆಸ್ಟಿಸೈಡ್ ತಯಾರಿಕೆ. (ವಿವರಕ್ಕೆ ಪುಟ 1 ನೋಡಿರಿ.) ಈ ಮಾರಣಾಂತಕ ಕಳೆಯಿಂದ ಕಷ್ಟಪಡುತ್ತಿದ್ದ ಜನಗಳಿಗೆ ಒಂದು ಸಣ್ಣ ಪರಿಹಾರ.

ಹಾಗೇ ತನ್ನ ಬಣ್ಣದಿಂದ ಎಲ್ಲರನ್ನೂ ಆಕರ್ಶಿಸುವ ಕೆಂಪು ಬಣ್ಣದ ಎಕ್ಸೋರದಿಂದ ಎಡಿಬಲ್ ಡೈ (ಆಹಾರದ ಬಣ್ಣ)ತಯಾರಿಕೆ. 2009ರಲ್ಲಿ ಈ ಮೂರೂ ಪ್ರಯೋಗಗಳು ಅಮೆರಿಕಕ್ಕೆ ಹಾರಿ ಪ್ರಶಸ್ತಿಗಳಿಸಿದ್ದರ ಹಿಂದೆ ಜೀವಶಾಸ್ತ್ರದ ಶಿಕ್ಷಕಿ ರೇಮನಿಯವರ ಅದಮ್ಯ ಉತ್ಸಾಹ, ಅಪರಿಮಿತ ಪರಿಶ್ರಮದ ಫಲವಿತ್ತು.

ರಸ್ತೆಬದಿಗಳಲ್ಲಿ ಕಾಣಸಿಗುವ ಡ್ಯುರಾಂಟ ಪ್ಲ್ಯುಮೇರಿ ಎಲೆಗಳ ರಸ ಉಪಯೋಗಿಸಿ, ಮೇಣದ ಜೊತೆ ಸೇರಿಸಿ, ಮಾಡಿದ ಮೇಣದ ಬತ್ತಿಗಳು ನವೋದಯ ಶಾಲೆಗಳ ಒಕ್ಕೂಟದ ಸ್ಪರ್ಧೆಯಲ್ಲಿ ಜಯಗಳಿಸಿ ಕೊಲ್ಕತ್ತದ 'ಇನ್‌ಟೆಲ್' ಸ್ಪರ್ಧೆಯಲ್ಲೂ ಮೆಚ್ಚಿಗೆ ಪಡೆಯಿತು.

ಜೀವಶಾಸ್ತ್ರದಲ್ಲಿ ಎಮ್.ಎಸ್ಸಿ, ಎಮ್.ಎಡ್. ಮಾಡಿದ ರೇಮನಿ ಕಳೆದ ಮೂರುವರೆ ವರ್ಷದಿಂದ ಶಿವಾರಗುಡ್ಡ ನವೋದಯ ಶಾಲೆಯಲ್ಲಿ ಜೀವಶಾಸ್ತ್ರ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪುಸ್ತಕ ಓದುವ ಹವ್ಯಾಸವಿರುವ ಇವರಿಗೆ ಜೈವಿಕ ತಂತ್ರಜ್ಞಾನ (*Biotechnology*)ದಲ್ಲಿ ಬಹು ಕುತೂಹಲ. ವರ್ಷಪೂರ್ತಿ ಲಭ್ಯವಿರುವ ಗಿಡಗಳು, ಅತಿ ಕಡಿಮೆ ವೆಚ್ಚದಲ್ಲಿ ಮಾಡ ಬಹುದಾದ, ದೊಡ್ಡ ದೊಡ್ಡ ಪ್ರಯೋಗ ಶಾಲೆಯ ಸಹಾಯವಿಲ್ಲದೆ, ಯಾರೇ ಬೇಕಾದರೂ ಮಾಡಬಹುದಾದಂತಹ ಪ್ರಯೋಗಗಳ ಆಯ್ಕೆಯೇ ರೇಮನಿಯವರ ಉದ್ದೇಶ. ಜವಾಹರ ನವೋದಯ ವಸತಿಶಾಲೆ ಯಾದ್ದರಿಂದ, ಪಾಠದ ಜವಾಬ್ದಾರಿಯಲ್ಲದೆ, ಕ್ರೀಡೆ, ಊಟದ ಏರ್ಪಾಡು, ಮಕ್ಕಳ ವಸತಿ ಸಮಸ್ಯೆಗಳು, ವಿವಿಧ ಸ್ಪರ್ಧೆಗಳಿಗೆ ತಯಾರಿಗಳಿಗೂ ನಿಗಾ ವಹಿಸಲೇ ಬೇಕು. ಇಷ್ಟೆಲ್ಲದರ ಮಧ್ಯೆ ಪರೀಕ್ಷೆಯಲ್ಲಿ ನೂರಕ್ಕೆ ನೂರು ವಿದ್ಯಾರ್ಥಿಗಳು ಉತ್ತೀರ್ಣರಾಗುವಂತೆ ನೋಡಿಕೊಳ್ಳುವುದೂ ಒಂದು ಜವಾಬ್ದಾರಿ.

2006ರಲ್ಲಿ 'ಅತ್ಯುತ್ತಮ ಶಿಕ್ಷಕಿ' ಪ್ರಶಸ್ತಿ, ದೆಹಲಿಗೆ ಹೋಗಿ, ರಾಷ್ಟ್ರೀಯ ಪುರಸ್ಕಾರ ಪಡೆದ ರೇಮನಿಯವರಿಗೆ ಇದೊಂದು ವಿಶಿಷ್ಟ ಅನುಭವ. ಇಂಟೆಲ್‌ನವರು ಕೊಟ್ಟಿರುವ ಪ್ರಶಸ್ತಿ ಪತ್ರ ಮತ್ತಷ್ಟು ಉತ್ಸಾಹ ತುಂಬಿದೆ. ಬಾಲ ಸಂಶೋಧಕರಿಗೆ ನೀವು ಕೊಡುತ್ತಿರುವ ಸಹಕಾರ, ಪ್ರೋತ್ಸಾಹ, ಅಭಿನಂದನೀಯ ಎಂದಿರುವ ಪ್ರಶಸ್ತಿಗೆ ಪೂರಕವೆಂಬಂತೆ 2008, 2009ರಲ್ಲಿ, ಅಮೆರಿಕದಲ್ಲಿ ಪ್ರಶಸ್ತಿಗೆ ಪಾತ್ರವಾದ್ದು ಇವರು ಮಾಡಿದ ಎರಡೂ ಪ್ರಯೋಗಗಳು. ನುಗ್ಗೆ ಎಲೆಯ ತಾಜಾ ರಸದಿಂದ ರಕ್ತದಲ್ಲಿನ ಸಕ್ಕರೆ ಅಂಶ ಕಡಿಮೆ ಮಾಡುವುದರ ಬಗ್ಗೆ ನಡೆದ ಪ್ರಯೋಗವನ್ನು ಕಾರಣಾಂತರಗಳಿಂದ ಪೂರ್ಣಗೊಳಿಸಲಾಗಲಿಲ್ಲ. ಇನ್ನೂ ಹಲವಾರು ಜನೋಪಯೋಗಿ ಪ್ರಯೋಗಗಳು ರೂಪು ತಾಳುತ್ತಿವೆ. ಕಾಯುವುದರಲ್ಲೂ, ಒಂದು ತರಹ ಸಂತಸ ಇದೆ ಎನ್ನುವ ರೇಮನಿಯವರದು ಬತ್ತದ ಉತ್ಸಾಹ. ಎಕ್ಸೋರ ಪ್ರಯೋಗ ನಡೆದಾಗ ಅದನ್ನು ಪೇಟೆಂಟ್ ಮಾಡಿಸಿಕೊಡಲು ಜನ ಸಿದ್ಧರಿದ್ದರು. ಆದರೆ ಈ ಶಿಕ್ಷಕಿ ಹೇಳಿದ್ದು ಒಂದೇ ಮಾತು. ಇವು 'ಜನೋಪಯೋಗಿ ಪ್ರಯೋಗಗಳು' ಇದರ ಪ್ರಯೋಜನವನ್ನು ಜನಗಳೇ ಪಡೆದುಕೊಳ್ಳಲಿ. ಹಗಲೂ ರಾತ್ರಿ ಜೊತೆಯಲ್ಲೇ ಇರುವುದರಿಂದ ಶಿಕ್ಷಕಿ ವಿದ್ಯಾರ್ಥಿಗಳ ಸಂಬಂಧಕ್ಕಿಂತ ಮುಕ್ತವಾದ, ಸ್ನೇಹಪೂರ್ಣ ವಾತಾವರಣ ಈ ಶಾಲೆಯದು. ಕನ್ನಡ, ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಮುತ್ತು ಪೋಣಿಸಿದಂತೆ ಬರೆಯುವ ಮಕ್ಕಳು ಯಾವಾಗಲೂ ಸುತ್ತುವರಿದಿರುವುದರಿಂದ, ದೂರ ದೂರಿನಲ್ಲಿ ಅಜ್ಜಿಯ ಜೊತೆ ಬೆಳೆಯುತ್ತಿರುವ ಪುಟ್ಟ ಮಗ, ಅಲ್ಲೇ ಕೆಲಸ ಮಾಡುತ್ತಿರುವ ಇಂಜಿನಿಯರ್ ಗಂಡನ ನೆನಪಾದಾಗ ಕಣ್ಣು ಮಂಜಾಗುವುದು ಮಕ್ಕಳಿಗೆ ತಿಳಿಯುವುದೇ ಇಲ್ಲ. ಇಂತಹ ಉತ್ಸಾಹಿ, ನಿಸ್ವಾರ್ಥ, ಸೇವಾ ಮನೋಭಾವದ ಶಿಕ್ಷಕರ ಅವಶ್ಯಕತೆ ಇರುವ ಈ ದಿನಗಳಲ್ಲಿ 'ರೇಮನಿ' ಯಂಥ ವರನ್ನು ನೆನೆಸಿಕೊಂಡರೆ, ಶಿಕ್ಷಕರ ದಿನಾಚರಣೆ ಅರ್ಥಪೂರ್ಣವಾದೀತು.

ಲೇಖನ – ಶ್ರೀಮತಿ ಅನಸೂಯ ಶರ್ಮ

ಗದಗಯ್ಯ ಹಿರೇಮಠ್

ವಿಜಾಪುರ ಜಿಲ್ಲೆಯ, ಬಸವನ ಬಾಗೇವಾಡಿ ತಾಲೂಕಿನ ಯಳವಾರ ಗ್ರಾಮದವರಾದ ಗದಗಯ್ಯ ಹಿರೇಮಠರವರು (65 ವರ್ಷ) ಬಿ.ಎ. ಪದವಿಯ ವರೆಗೆ ಓದಿದ್ದು ದೇಶೀ ತಂತ್ರಜ್ಞಾನ ಬಳಸಿ ಮನೆಯಲ್ಲಿಯೇ ಕೃಷಿ ಯಂತ್ರೋಪ ಕರಣಗಳನ್ನು ತಯಾರಿಸಿದ್ದಾರೆ. ರಾಜ್ಯ ಸರಕಾರದಿಂದ 2006ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಯೂ ಇವರಿಗೆ ಲಭಿಸಿದೆ. 64 ಎಕರೆ ಜಮೀನನ್ನು ಹೊಂದಿರುವ ಇವರು ಮೊದಲೆಲ್ಲಾ ಕೈಯಿಂದ ಬಿತ್ತುವ ಸಮಯದಲ್ಲಿ ಸುವ್ಯವಸ್ಥಿತ ರೀತಿಯಲ್ಲಿ ಸಸಿಗಳು ಇರುತ್ತಿರಲಿಲ್ಲವಂತೆ. ಈ ಕಾರಣವೇ ಇವರಿಗೆ ವ್ಯವಸ್ಥಿತ ರೀತಿಯಲ್ಲಿ ಕಾಳು ಬೀಳುವ ಯಾವುದಾದರೂ ಸಾಧನವನ್ನು ತಯಾರಿಸುವ ಯೋಚನೆಗೆ ನಾಂದಿ ಹಾಕಿದೆ. ಒಕ್ಕಲುತನ ಉಪಕರಣಗಳನ್ನು ಮಾಡುವ ಬಡಿಗನ ಸಹಾಯದಿಂದ ಅರ್ಧ ಕಟ್ಟಿಗೆ, ಅರ್ಧ ಕಬ್ಬಿಣ ಎತ್ತಿನ ಕೂರಿಗೆಯನ್ನು ಮೊದಲು ತಯಾರಿಸಿದ್ದಾರೆ. ಹಾಗೆಯೇ ಬಡಿಗನ ಸಹಾಯವಿಲ್ಲದೇ ಅವರು ಪ್ರಯೋಗ ಮಾಡುತ್ತಾ ಮಾಡುತ್ತಾ ಸಾಧಕನೇ ಸಿದ್ಧನಾದ ಎಂಬ ಉಕ್ತಿಯಂತೆ ಹತ್ತು ಹಲವು ವಸ್ತುಗಳನ್ನು ಅಂದರೆ ಎತ್ತು ಚಾಲಿತ, ಯಂತ್ರಚಾಲಿತ ಮತ್ತು ಮನುಷ್ಯ ಚಾಲಿತ ಉಪಕರಣ ಗಳನ್ನು ತಯಾರಿಸಿದ್ದಾರೆ. ಈ ಮೇಲಿನ ವಸ್ತುಗಳನ್ನು ಪರಿಶೀಲಿಸಿದ ಕೃಷಿ ಇಲಾಖೆಯ ಅಧಿಕಾರಿಗಳು 2006ನೇ ಸಾಲಿನಲ್ಲಿ ಒಕ್ಕಲುತನ ಉಪಕರಣಗಳ ವಿಭಾಗದಲ್ಲಿ ಕೃಷಿ ಪಂಡಿತ ಪ್ರಥಮ ಪ್ರಶಸ್ತಿಯನ್ನು ನೀಡಿದ್ದಾರೆ ಮತ್ತು ಕೃಷಿ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ, ಬಿಜಾಪುರ ಇವರು ನಡೆಸಿದ ವಸ್ತು ಪ್ರದರ್ಶನದಲ್ಲಿ ಪ್ರಥಮ ಬಹುಮಾನ ಪಡೆದಿರುತ್ತಾರೆ. ಸ್ಥಳೀಯ ಭೂಮಿ ಹಾಗೂ ಬೆಳೆಗಳಿಗೆ ಅನುಗುಣವಾದ ಕೃಷಿ ಯಂತ್ರೋಪಕರಣಗಳನ್ನು ತಯಾರಿಸಿ ಕಡಿಮೆ ವೆಚ್ಚದಲ್ಲಿ ಕೊಟ್ಟಿದ್ದು, ಈ ಕಾಯಕದಲ್ಲಿ ತೃಪ್ತಿ ತಂದಿದೆ. ನನ್ನ ಕಾಯಕಕ್ಕೆ ಕಾರ್ಯಗಾರ, ಪಾಠಶಾಲೆ, ಪ್ರಯೋಗಶಾಲೆ ಎಲ್ಲವೂ ಮನೆಯೇ ಎಂದು ಗದಗಯ್ಯನವರು ಹೇಳಿದ್ದಾರೆ. ತಮ್ಮ ಮನೆಯಲ್ಲಿಯೇ ಇರುವಂತ ಸಣ್ಣ ಗ್ಯಾರೇಜ್‌ನಲ್ಲಿ ಸೈಕಲ್ ಚಾಲಿತ ಸ್ಪ್ರೇಯರ್ ಡಸ್ಟರ್ ಮತ್ತು ಎಡಕುಂಟೆ, ವಿವಿಧ ಅಶ್ವ ಶಕ್ತಿಗಳ ಟ್ರಾಕ್ಟರ್‌ಗಳಿಗೆ ಹೊಂದುವಂತ ವಿವಿಧ ಬೆಳೆಗಳಿಗಾಗಿ ಬೀಜ ಮತ್ತು ಗೊಬ್ಬರ ಬಿತ್ತನೆ ಕೂರಿಗೆಗಳು ಹಾಗೂ ಎತ್ತು ಚಾಲಿತ ಕೂರಿಗೆಗಳು, ರೂಟಾವೇಟರ್, ಕುಂಟೆ ನೇಗಿಲು, ಎಲ್ಲಾ ತರಹದ ಕಾಳುಗಳನ್ನು ಬಿತ್ತುವ ಕೂರಿಗೆ, ಕಳೆ ತೆಗೆಯುವ ಸೈಕಲ್ ಹೀಗೆ ಕಡಿಮೆ ಖರ್ಚಿನಿಂದ ಅಧಿಕ ಉತ್ಪಾದನ ಮಾಡುವಂತಹ ಅನೇಕ ಸುಧಾರಿತ ಉಪಕರಣಗಳನ್ನು ಗದಗಯ್ಯನವರು ತಮ್ಮ ಸ್ವಂತಿಕೆಯಿಂದ ತಯಾರಿಸಿದ್ದಾರೆ. ಅವುಗಳಲ್ಲಿ ಕೆಲವು ಯಂತ್ರಗಳ ಮಾಹಿತಿ ಯನ್ನು ದೇಶೀಯ ತಂತ್ರಜ್ಞಾನದಲ್ಲಿ (ವಿವರಕ್ಕೆ ಪುಟ 6 ನೋಡಿರಿ) ಕೊಡಲಾಗಿದೆ. ಹೆಚ್ಚಿನ ಮಾಹಿತಿಗೆ ಇವರನ್ನು *9449645400* ಗೆ ಸಂಪರ್ಕಿಸಬಹುದು.

ಸಂಗಮೇಶ ಮುಗಳಿಯವರ ಗಿಡಮೂಲಿಕೆಗಳ ಉಪಯೋಗಗಳು

ಗುಲ್ಬರ್ಗಾ ಜಿಲ್ಲೆ, ಅಫಜಲಪುರ ತಾಲೂಕು, ಚಿಂಚೋಳಿಯ ಸಂಗಮೇಶ ಮುಗಳಿಯವರು ಮಾನವರ ಅನೇಕ ಕಾಯಿಲೆಗಳಿಗೆ ಗಿಡ ಮೂಲಿಕೆಗಳನ್ನು ಉಪಯೋಗಿಸಿಕೊಂಡು ಚಿಕಿತ್ಸೆ ನೀಡುತ್ತಾರೆ. ಮಾಜಿ ಸೈನಿಕರಾಗಿದ್ದ ಇವರು 9ನೇ ತರಗತಿಯವರೆಗೆ ಓದಿದ್ದು, ಈಗ ವ್ಯವಸಾಯ ಹಾಗೂ ವಂಶಪಾರಂಪರ್ಯದಿಂದ ಬಂದಿರುವಂತಹ ನಾಟಿ ವೈದ್ಯ ವಿದ್ಯೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಅವರು ಹೇಳಿರುವಂತ ಕೆಲವು ಚಿಕಿತ್ಸಾ ವಿಧಾನಗಳನ್ನು ಇಲ್ಲಿ ತಿಳಿಸಲಾಗಿದೆ.

1)**ಜಲೋಧರ** – ಹೊಟ್ಟೆ, ಬೆನ್ನು, ಕೈಕಾಲು, ತಲೆ ಯಾವುದೇ ಭಾಗದಲ್ಲಿ ತುಂಬಿದ ನೀರು ಕರಗಿಹೋಗಲು ಮತ್ತೆ ತುಂಬದಂತೆ ಮಾಡಲು ಇವರು ನೀಡುವ ಚಿಕಿತ್ಸೆ ಈ ರೀತಿ ಇದೆ. ಒಂದು ಕೆ.ಜಿ. ಹಸಿ ಎಕ್ಕ (*Calotropis gigantia, R,Br*) ಗಿಡದ ಎಲೆಗಳನ್ನು 50 ಗ್ರಾಂ ಅರಿಸಿನ ಹಾಕಿ ಕುಟ್ಟಬೇಕು. ಅದನ್ನು ನೆರಳಿನಲ್ಲಿ ಒಣಗಿಸಿ ನಂತರ ಪುಡಿ ಮಡಿಕೊಳ್ಳಬೇಕು. ಇದನ್ನು ರೋಗಿಯು ಚೂರ್ಣಮಾಡಿಕೊಂಡು ಉಪಯೋಗಿಸಬೇಕು. ಮೊದಲು 3ದಿನ ಕಡಲೇಕಾಳಿನ ಪ್ರಮಾಣದಷ್ಟು ಪ್ರತಿ ಮುಂಜಾನೆ ಮತ್ತು ರಾತ್ರಿ ಊಟದ ನಂತರ ತೆಗೆದುಕೊಳ್ಳಬೇಕು. ನಂತರದ 3 ದಿನ ಮೂರು ಹೊತ್ತು ಊಟದ ನಂತರ, ಅದಾದ ಮೇಲೆ ಎರಡೆರಡು ಕಡಲೆಕಾಲಿನ ಗಾತ್ರದಷ್ಟು 3 ಹೊತ್ತು 9 ದಿನ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ.

2)**ಮಕ್ಕಳ ಬಲಗ್ರಹಕ್ಕೆ** (*Rickets*)–2 ತಿಂಗಳಿಂದ 2 ವರ್ಷದ ಮಕ್ಕಳಲ್ಲಿ ಬಾಲಗ್ರಹ ಕಂಡುಬಂದಲ್ಲಿ ಇವರು ಕೊಡುವ ಚಿಕಿತ್ಸಾ ವಿಧಾನವು ಹೀಗಿದೆ. ತಂಬಿಗೆಯ ತುಂಬ ನೀರು ತುಂಬಿ ಅದರಲ್ಲಿ 3 ಚಮಚ ಅಡುಗೆಗೆ ಬಳಸುವ ಎಣ್ಣೆ ಅಥವಾ ಕೊಬ್ಬರೆ ಎಣ್ಣೆ ಹಾಕಿ ಮಕ್ಕಳನ್ನು ತಲೆಕೆಳಗೆ ಮಾಡಿ ತಂಬಿಗೆಯ ಮೇಲೆ ತಲೆಯನ್ನು ಇಡಬೇಕು. ಈ ರೀತಿ ಮೂರು ಸಲ ಮಾಡಿದರೆ, 24 ಗಂಟೆಗಳಲ್ಲಿ ಈ ಕಾಯಿಲೆ ನಿವಾರಣೆಯಾಗುತ್ತದೆಯಂತೆ.

3)**ಕಾಮಾಲೆ ರೋಗಕ್ಕೆ** – ಕಾಮಾಲೆ ರೋಗಕ್ಕೆ ಇವರು ದೇವಡಾಂಗ್ರಿಫಲ (ದೇವದಾರಿ) (*Erythroxylum monogyrun, Roxb*) ಎಂಬ ಬಳ್ಳಿಯಲ್ಲಿ ಬಿಡುವಂತಹ ಕಾಯಿಗಳನ್ನು ಉಪಯೋಗಿಸುತ್ತಾರೆ. ಒಣಗಿರುವಂತಹ ಒಂದು ಕಾಯಿಯನ್ನು 15 ಮಿ.ಲೀ. ನೀರಿನಲ್ಲಿ ನೆನೆಸಿ 20 ನಿಮಿಷದ ನಂತರ ಕಾಯಿಯನ್ನು ತೆಗೆದು ಆ ನೀರನ್ನು ಒಂದೇ ಸಲ ಕುಡಿಯುವುದರಿಂದ ರೋಗ ಯಾವ ಹಂತದಲ್ಲಿದ್ದರೂ ನಿವಾರಣೆ ಯಾಗುತ್ತದೆಯಂತೆ. ರೋಗ ಇರುವವರಿಗೆ ಯಾವ ಸಮಯದಲ್ಲಾದರು ಸರಿ ಒಂದು ಸಲ ಮಾತ್ರ ಇದನ್ನು ಕೊಡಲಾಗುವುದೆಂದು ಹೇಳಿದ್ದಾರೆ.

4)**ಹಾವು ಕಡಿತಕ್ಕೆ ಔಷಧಿ** – ಹಾವು ಕಚ್ಚಿರುವವರಿಗೆ ಸಂಗಮೇಶರವರು ಕಾಚಿನ ಗಿಡದ (*Acacia catechu, willd*) ಎಲೆಯ ಅರ್ಧಚಮಚ ಚೂರ್ಣವನ್ನು ಒಂದು ಸಲ ಕೊಡುತ್ತಾರೆ. ಹಾಗು ಎಕ್ಕ (*Calotropis gigantis, R.Br*) ಗಿಡದ ಎಲೆಯ ರಸವನ್ನು ಅರ್ಧ ಚಮಚದಷ್ಟು ಮೂಗಿನಲ್ಲಿ ಹಿಂಡುವುದರಿಂದಲೂ ಹಾವಿನ ವಿಷ ನಿವಾರಣೆಯಾಗುತ್ತದಂತೆ.

5)**ಸ್ತ್ರೀರೋಗಗಳಿಗೆ ಚಿಕಿತ್ಸೆ** – ಸ್ತ್ರೀಯರಲ್ಲಿ ಹೆಚ್ಚಿನ ರಕ್ತಸ್ರಾವವಾಗುತ್ತಿದ್ದರೆ ಅಥವಾ ಬಿಳುಪು ಹೊಗುತ್ತಿದ್ದರೆ ಅವರು ಹೊನ್ನವರಿಕೆ ಸೊಪ್ಪಿನ (*Vicoa indica, Dc*) ಎಲೆಗಳನ್ನು ಚೆನ್ನಾಗಿ ಅರೆದು ತೆಗೆದ ರಸವನ್ನು 100ಮಿ.ಲೀನಂತೆ ಪ್ರತಿದಿನ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ 7–10 ದಿನಗಳವರೆಗೆ ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

6)**ರಕ್ತ ಮೂತ್ರಕ್ಕೆ** – ಮೂತ್ರದಲ್ಲಿ ರಕ್ತವು ಹೋಗುತ್ತಿದ್ದರೆ ಅದಕ್ಕೆ ಕೊಡುವ ಚಿಕಿತ್ಸಾ ವಿಧಾನವು ಹೀಗಿದೆ. ಮಜ್ಜಿಗೆ ಹುಲ್ಲನ್ನು (*Caralluna adscentens, R,Br*) 5 ಅಥವಾ 7 ಇಂಚಿನಷ್ಟು ತೆಗೆದುಕೊಂಡು, ಅರೆದು ಅದನ್ನು 200ಮಿ.ಲೀ. ಮಜ್ಜಿಗೆಯಲ್ಲಿ ಮಿಶ್ರಣಮಾಡಿ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ 7 ರಿಂದ 10 ದಿನಗಳು ತೆಗೆದುಕೊಂಡರೆ ಮತ್ತೆ ಈ ತರಹದ ಸಮಸ್ಯೆ ಕಾಣಿಸುವುದಿಲ್ಲವಂತೆ.

7)**ಚರ್ಮರೋಗಗಳಿಗೆ** – ಕತ್ತೆ ಕಿರುಬನ ಗಿಡ (*Aristolochia bracteata, Retz*)ದ ಎಲೆಗಳು ಚರ್ಮರೋಗಗಳಿಗೆ ರಾಮಬಾಣವಂತೆ. ಸಂಗಮೇಶರವರು ಈ ಗಿಡದ ಎಲೆಗಳನ್ನು ಚರ್ಮರೋಗದ ಚಿಕಿತ್ಸೆಗೆ ಉಪಯೋಗಿಸುತ್ತಾರೆ. ಗಿಡದ ಎಲೆಗಳನ್ನು ನುಣುಪಾಗಿ ಅರೆದು ಅದನ್ನು ಇಸುಬು, ಸರ್ಪಸುತ್ತು ಹಾಗು ಮುಖದ ಮೇಲಿನ ಮೊಡವೆಗಳಿಗೂ ಲೇಪಿಸಿ ಒಂದು ಗಂಟೆಯವರೆಗೆ ಬಿಡುತ್ತಾರೆ. ಹೀಗೆ 15 ರಿಂದ 20 ದಿನಗಳವರೆಗೆ ಮಾಡುವುದರಿಂದ ಗಾಯದ ಕಲೆಗಳು ಮತ್ತು ಮೊಡವೆಗಳ ಕಲೆಗಳೂ ಯೋಗುತ್ತದಂತೆ.

8)**ವೀರ್ಯಾಣು ವೃದ್ಧಿಗೆ** – ಪುರುಷರಲ್ಲಿ ವೀರ್ಯಾಣು ವೃದ್ಧಿಗೆ ಅಕಲ್‌ಕಾರೆ (*Cotula anthmoidis, L*)ಯ ಬೇರುಗಳನ್ನು ಚೆನ್ನಾಗಿ ಅರೆದು ಚೂರ್ಣ ಮಾಡಿ, ಅರ್ಧ ಚಮಚದಷ್ಟು ಚೂರ್ಣವನ್ನು ಬಿಳಿ ಈರುಳ್ಳಿ ಗಡ್ಡೆಯ 100 ಮಿ.ಲೀ. ರಸದಲ್ಲಿ ಮಿಶ್ರಣ ಮಾಡಿ ಪ್ರತಿದಿನ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ 45 ದಿನಗಳವರೆಗೆ ತೆಗೆದುಕೊಳ್ಳಬೇಕಂತೆ. ಈ ರೀತಿಯ ಚಿಕಿತ್ಸೆಯನ್ನು ಸಂಗಮೇಶರವರು ಅನೇಕರಿಗೆ ಕೊಟ್ಟಿದ್ದು ಅವರಲ್ಲಿ ವೀರ್ಯಾಣುಗಳ ಸಂಖ್ಯೆ ಹೆಚ್ಚಿಗೆಯಾಗಿರುವ ದಾಖಲೆಯು ಇದೆಯಂತೆ.

9)**ಸ್ತ್ರೀಯರಲ್ಲಿ ಗರ್ಭಧಾರಣೆಗೆ** – ಸ್ತ್ರೀಯರು ಗರ್ಭಧರಿಸಲು ಅಶಕ್ತರಾಗಿದ್ದಲ್ಲಿ ಅಂತಹವರಿಗೆ ಇವರು ಕೊಡುವ ಚಿಕಿತ್ಸಾ ವಿಧಾನವು ಹೀಗಿದೆ. ಧಗಡಿಬಳ್ಳಿ (*Coculushirsutus Diels*) ಮತ್ತು ತೊಟ್ಲಗಿಡ (*Capparis brevispina, DC*)ದ ಎಲೆಗಳನ್ನು ಚಿಕಿತ್ಸೆಗೆ ಉಪಯೋಗಿಸುತ್ತಾರೆ. ಧಗಡಿಬಳ್ಳಿಯ ಎಲೆಗಳನ್ನು ಒಂದು ಹಿಡಿ ತೆಗೆದುಕೊಂಡು ಅರೆದು ರಸವನ್ನು ತೆಗೆದು ಪ್ರತಿದಿನ ಬೆಳಿಗ್ಗೆ 100 ಮಿ.ಲೀ. ತೆಗೆದುಕೊಳ್ಳಬೇಕು. ಮರುದಿನ ಇದೇ ರೀತಿ ತೊಟ್ಲಗಿಡದ ಎಲೆಗಳನ್ನು ಉಪಯೋಗಿಸಬೇಕು. ಹೀಗೆ ಪರ್ಯಾಯವಾಗಿ 10 ದಿನಗಳವರೆಗೆ ಈ ವಿಧಾನವನ್ನು ಅನುಸರಿಸಬೇಕೆಂದು ಹೇಳಿದ್ದಾರೆ.

ಜಾನಪದ ವೈದ್ಯ ಅಬೂಬಕರ್ ಕಣ್ಣುಕಟ್ಲು


ಶೃಂಗೇರಿ ತಾಲ್ಲೂಕಿನ, ಎಡದಾಳು ಗ್ರಾಮದ ಸಮೀಪದ ಕಣ್ಣುಕಟ್ಲು ವಾಸಿಯಾಗಿರುವ ಜನಪದ ವೈದ್ಯ ಶ್ರೀ ಅಬೂಬಕರ್‌ರವರು ತಮ್ಮ ವಂಶ ಪಾರಂಪರ್ಯದಿಂದ ಬಂದ ಚಿಕಿತ್ಸಾ ಪದ್ಧತಿಯನ್ನು ಉಳಿಸಿ, ಅಭಿವೃದ್ಧಿಪಡಿಸಿ, ಪ್ರಯೋಗಿಸುತ್ತಿರುವರು. ಇವರು ಸರಳ ಸಜ್ಜನಿಕೆಯ ವ್ಯಕ್ತಿತ್ವದವರು.

ಅನುಭವಕ್ಕಿಂತ ದೊಡ್ಡ ವಿದ್ಯೆ ಮತ್ತೊಂದಿಲ್ಲ ಎಂಬ ಪ್ರಾಜನರ ನುಡಿಯಂತೆ ತಲೆತಲಾಂತರಗಳಿಂದ ಪ್ರಯೋಗಿಕವಾಗಿ ವಿವಿಧ ರೋಗಗಳ ಚಿಕಿತ್ಸೆಯ ಅನುಭವ ಸಾರಾಂಶವನ್ನು ಹೊಂದಿದ ಇವರು ಮೂಲವ್ಯಾಧಿ, ವಾತಾ (ಗಂಟುವಾತಾ), ಸ್ತ್ರೀಯರ ತೊಂದರೆಗಳಿಗೆ, ಸಕ್ಕರೆ ಕಾಯಿಲೆ ಮುಂತಾದ ಹತ್ತು ಹಲವು ಕಾಯಿಲೆಗಳಿಗೆ ಗಿಡಮೂಲಿಕೆಗಳಿಂದ ಪರಿಣಾಮಕಾರಿ ಔಷಧಿ ನೀಡುವಲ್ಲಿ ಸಿದ್ಧಹಸ್ತರಾಗಿದ್ದಾರೆ. ಇಂತಹ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು ಎಲ್ಲಾ ಕಡೆಗಳಲ್ಲಿ ತಪಾಸಣೆ ಮಾಡಿಸಿ ಏನು ಪರಿಹಾರ ಸಿಗದೇ ಇದ್ದಾಗ ಕೊನೆಯ ಪ್ರಯತ್ನ ವೆಂದುಕೊಂಡು ಅಬೂಬಕರ್ ಹತ್ತಿರ ಬಂದ ನೂರಾರು ರೋಗಿಗಳು ಕೆಲವೇ ದಿನಗಳಲ್ಲಿ ಸಂಪೂರ್ಣ ಗುಣಮುಖರಾಗುವುದು ಈಗ ಸರ್ವೇ ಸಾಮಾನ್ಯ ಸಂಗತಿಯಾಗಿದೆ.

ಉತ್ತಮ ಕೃಷಿಕರೂ, ಕಷ್ಟ ಸಹಿಷ್ಣುಗಳು, ಶ್ರಮ ಜೀವಿಗಳು ಆಗಿರುವ ಅಬೂಬಕರ್‌ರವರು ರೋಗಿಗಳಿಂದ ಯಾವುದೇ ಫಲಾಪೇಕ್ಷೆ ಬಯಸದೇ ಬಡವರು, ಬಲ್ಲಿದರು ಎಂಬುದಕ್ಕೆ ಹೆಚ್ಚಿನ ಮಾನ್ಯತೆ ನೀಡದೆ ಅವರಲ್ಲಿ ಜೀವನೋತ್ಸಾಹ ತುಂಬಿ ಸಂಪೂರ್ಣ ಸೇವಾ ಮನೋಭಾವನೆ ಯಿಂದ ಕರ್ತವ್ಯ ಲೋಪವಾಗದಂತೆ ನಡೆಸಿಕೊಂಡು ಬರುತ್ತಿದ್ದಾರೆ. ಇಂತಹ ಆರೋಗ್ಯದಾನದ ಕಾಯಕದಲ್ಲಿ ತೊಡಗಿಸಿಕೊಂಡಿರುವ ಇವರಿಗೆ ಶೃಂಗೇರಿ ರೋಟರಿ ಕ್ಲಬ್‌ನವರು ಪುರಸ್ಕರಿಸಿ ಸನ್ಮಾನಿಸಿದ್ದಾರೆ. ಅಲ್ಲದೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರ ಮಂಜುನಾಥೇಶ್ವರ ಆಯುರ್ವೇದ ಕಾಲೇಜಿನ ಜಾನಪದ ವೈದ್ಯಕೀಯ ಸಂಶೋಧನಾ ಕೇಂದ್ರದ ವತಿಯಿಂದ ನೀಡುವ 2008-09 ನೇ ಸಾಲಿನ ರಾಜ್ಯಮಟ್ಟದ ಜನಪದ ವೈದ್ಯಸಿರಿ ಎಂಬ ಪ್ರಶಸ್ತಿಯನ್ನು 53 ವರ್ಷದ ಅಬೂಬಕರ್‌ರವರಿಗೆ ನೀಡಿ ಸನ್ಮಾನಿಸಲಾಗಿದೆ. *ಹೆಚ್ಚಿನ ಮಾಹಿತಿಗಾಗಿ ಅಬೂಬಕರ್‌ರವರನ್ನು ದೂರವಾಣಿ : 08265-257123 ಅಥವಾ ಮೊಬೈಲ್: 9481579031 ಗೆ ಸಂಪರ್ಕಿಸಬಹುದು.*

ನರವಲಿ (ನಾರುಳ್ಳಿ) ಉಪಚಾರ

ಆಂಧ್ರಪ್ರದೇಶದ, ಕಮ್ಮಮ್ ಜಿಲ್ಲೆಯ ಶ್ರೀನಿವಾಸರವರು ಮುಖದ ಮೇಲೆ ಕಾಣಿಸಿಕೊಳ್ಳುವ ನಾರುಳ್ಳಿಯ ಮೇಲೆ ಚಿಕ್ಕದಾದ ಗಾಯವನ್ನು ಮಾಡುತ್ತಾರೆ. ನಂತರ ಅದರ ಮೇಲೆ ಮಾವಿನ ಕಾಯಿ ಕಿತ್ತಾಗ ಒಸರುವ ರಸವನ್ನು ಹಚ್ಚುತ್ತಾರೆ. ಇದರಿಂದ ಆ ಸ್ಥಳದಲ್ಲಿ ನೀರು ಗುಳ್ಳೆಗಳಾಗಿ ಕೆಲವು ದಿನಗಳಲ್ಲಿ ಕಾಣದಾಗುತ್ತವೆ. ನಾರುಳ್ಳಿಯು ಪೂರ್ಣ ವಾಸಿಯಾಗಲು ಅವರು ಈ ವಿಧಾನವನ್ನು ಐದರಿಂದ ಆರು ಸಲ ಪುನರಾವರ್ತಿಸುತ್ತಾರೆ.



(ವೈಜ್ಞಾನಿಕ ಹಿನ್ನೆಲೆ : ಮಾವಿನ ಗಿಡದ ಹಾಲಿನಂಥ ದ್ರವವನ್ನು ವಸಡಿನ ತೊಂದರೆಗಳಿಗೆ (gingivitis) ಉಪಚರಿಸಲು ಬಳಸುತ್ತಾರೆ. ಗಿಡದ ಅಂಟನ್ನು ಸಾಸುವೆ ಎಣ್ಣೆಯಲ್ಲಿ ಬೆರಸಿ ಕಜ್ಜಿ ತುರಿಗಳಿಗೆ, ನರವಲಿಗಳಿಗೆ ಮತ್ತು ಚರ್ಮದ ರೋಗಗಳಿಗೆ ಬಳಸಲಾಗುತ್ತದೆ ಎಂಬುದು ಈಗಾಗಲೇ ತಿಳಿದಿದೆ. ವಿವರಕ್ಕೆ Manandhar, S. 2002 Plants and people of Nepal, Timber Press Nepal ನೋಡಿರಿ)

(ವಿಶೇಷ ಸೂಚನೆ - ಈ ರೀತಿ ಪದ್ಧತಿಗಳು ವ್ಯಕ್ತಿಗಳ ಸ್ವಂತ ಅನುಭವಗಳಿಗೆ ಒಳಪಟ್ಟಿವೆ. ಇವುಗಳನ್ನು ಬಳಸಬೇಕಾದಲ್ಲಿ ಆಯಾ ಪ್ರಾಂತ್ಯಗಳಲ್ಲಿನ ವ್ಯಕ್ತಿಗಳ ಅಭಿಪ್ರಾಯಗಳನ್ನು ಸ್ವಯಂ ಕೇಳಿ ತಿಳಿದುಕೊಳ್ಳಬೇಕಾಗುತ್ತದೆ. ತಮ್ಮ ಸ್ವಂತ ಹೊಣೆಗಾರಿಕೆಯ ಮೇಲೆ ಇವುಗಳನ್ನು ಬಳಸಿಕೊಂಡಲ್ಲಿ ಅದರ ಫಲಿತಾಂಶವನ್ನು ತಿಳಿಸಿ - ಸಂ)

ಮೂಲ: *Honey Bee Vol 20(1) January - March 2009*

ಐದನೇ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಸನ್ಮಾನ ಸಮಾರಂಭ

ದೆಹಲಿಯಲ್ಲಿ ನವೆಂಬರ್ 18,2009ರಂದು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಐದನೇ ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಾದ 74 ಸಂಶೋಧಕರಿಗೆ ಸನ್ಮಾನ ನೀಡುವ ಸಮಾರಂಭ ನಡೆಸಲಾಯಿತು. ಭಾರತದ ರಾಷ್ಟ್ರಪತಿಯವರಾದ ಶ್ರೀಮತಿ ಪ್ರತಿಭಾ ಪಾಟೀಲ್‌ರವರು ವಿಜೇತರಿಗೆ ಬಹುಮಾನಗಳನ್ನು ವಿತರಿಸಿದರು. ಈ ಬಾರಿ ಕರ್ನಾಟಕದಿಂದ ನಾಲ್ಕು ಜನರನ್ನು ಸನ್ಮಾನಿಸಲಾಗಿದೆ. ಅವರ ಸಂಶೋಧನೆಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ.

1) ಧಾರವಾಡದ ದಾವಲ್‌ಸಾಬ್‌ಲಾಡಮ್ಮನವರ್ ರವರು (20ವರ್ಷ) ಎಲ್.ಪಿ.ಜಿ. ಗ್ಯಾಸ್ ಸ್ಟೌವಿಗೆ ವಿದ್ಯುತ್‌ಚಾಲಿತ ಆಟೋ ಸ್ಟಾಪರನ್ನು ತಯಾರಿಸಿದ್ದಾರೆ. ಇದರಲ್ಲಿ ಸಮಯವನ್ನು ನಿಗದಿಗೊಳಿಸಬಹುದಾಗಿದ್ದು, ಗಡುವು ಮುಗಿದ ಮೇಲೆ ರೆಗ್ಯುಲೇಟರ್ ಬಂದ್ ಆಗುವ ತಂತ್ರವನ್ನು ಅಳವಡಿಸಿದ್ದಾರೆ. ಇದು ಒಲೆಯ ಮೇಲೆ ಇಟ್ಟಿರುವಂತಹ ಕುಕ್ಕರ್ ಎಷ್ಟು ಬಾರಿ ವಿಶಲ್‌ಗಳನ್ನು ಹಾಕಿದೆಯೆಂದು ತೋರಿಸುತ್ತದೆ. ಬೇರೆ ಬೇರೆ ಅಡುಗೆಗಳು ತೆಗೆದುಕೊಳ್ಳುವ ಸಮಯದ ಮೇಲೆ ಆಟೋ ಸ್ಟಾಪರ್‌ನಲ್ಲಿ ಅಳವಡಿಸಿರುವ ಗಡಿಯಾರದಲ್ಲಿ ಸಮಯವನ್ನು ನಿಗದೆ ಪಡಿಸಿದರೆ ಗಡುವು ಮುಗಿದ ನತಂರ ಗ್ಯಾಸ್ ಆಫ್ ಆಗುತ್ತದೆ. ಅಲ್ಲದೆ ಗ್ಯಾಸ್ ಸ್ಟೌವ್ ಆಫಾದ ನಂತರ ಅಲಾರಂ ಹೊಡೆಯುತ್ತದೆ. ಈ ಸಾಧನವು ಆಹಾರವನ್ನು ಹೆಚ್ಚು ಬೇಯುವುದನ್ನು ತಡೆಯುತ್ತದೆ. ಅಲ್ಲದೆ ಗ್ಯಾಸ್, ಸಮಯ ಮತ್ತು ಹಣ ಉಳಿತಾಯ ವಾದಂತಾಗುತ್ತದೆ. ಈ ಅನುಶೋಧನೆಗೆ ರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿ ವಿಭಾಗದಲ್ಲಿ ಪ್ರಥಮ ಬಹುಮಾನ ಬಂದಿದೆ.

2) ಬೆಳ್ತಂಗಡಿ ತಾಲೂಕಿನ ಅಮ್ಡಾಲು ರವಿಶಂಕರ್ ಭಟ್ಟರು ಮೆಣಸಿನ ಸೊರಗು ರೋಗದ ಪ್ರತಿರೋಧವಿರುವ ಕಸಿ ಪದ್ಧತಿಯನ್ನು ಕಂಡುಕೊಂಡಿದ್ದಾರೆ. ಈ ಕಾಳು ಮೆಣಸು ಕಸಿಗಿಡ ಸೊರಗು ರೋಗದಿಂದ ಮುಕ್ತವಾಗಿದೆ ಎಂದು ಹೇಳಿದ್ದಾರೆ. ಕಾಡು ಹಿಪ್ಪಲಿಯನ್ನು ಮಾತ್ರುಗಿಡವಾಗಿ ಕಸಿಗೆ ಬಳಸಿಕೊಂಡಿದ್ದು ಸಾಧಾರಣ ಕಾಳು ಮೆಣಸಿನ ಯಾವುದೇ ತಳಿಯ ಬಳ್ಳಿಯನ್ನು ಇದಕ್ಕೆ ಕಸಿ ಕಟ್ಟಬಹುದಂತೆ. ಮಾತೃಗುಣದಿಂದಾಗಿ ಬೇರಿನ ಮೂಲಕ ಬರುವ ಸೊರಗು ಬಾಧೆಯಿಂದ ಇವು ಮುಕ್ತವಾಗಿರುತ್ತವೆಯಂತೆ. ಇವರ ಈ ಅನುಶೋಧನೆಗೆ ರಾಜ್ಯ ಪ್ರಶಸ್ತಿ ದೊರಕಿದೆ.

3) ಬೆಂಗಳೂರಿನ ಕೆ. ಬಾಲಕೃಷ್ಣರವರು ನಿಧಾನವಾಗಿ ಹರಿಯುವ ಚರಂಡಿಯ ನೀರು ಅಥವಾ ಬೇರೆ ಯಾವುದೇ ಹರಿಯುವ ನೀರನ್ನು ಉಪಯೋಗಿಸಿಕೊಂಡು ವಿದ್ಯುತ್ ಉತ್ಪಾದಿಸುವಂತಹ ಸಾಧನವನ್ನು ತಯಾರಿಸಿದ್ದಾರೆ. ಈ ಸಾಧನವು ಕೊಳವೆಯಾಕಾರದ ಡ್ರಮ್‌ನಂತಿದ್ದು, ಒಳಗಡೆ ಸುರುಳಿಯಾಕಾರದ ಬ್ಲೇಡ್‌ಗಳನ್ನು ಒಳಗೊಂಡಿದೆ. ಈ ಸಾಧನವು 30 ಕಿ.ವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದೆ. ಈ ಅನುಶೋಧನೆಗೆ ಸಮಾಧಾನಕರ ಬಹುಮಾನ ದೊರಕಿದೆ.

4) ಚಿಕ್ಕಮಗಳೂರಿನ ಕೊಪ್ಪಾದ ನರಸಿಂಹ ಭಂಡಾರಿಯವರು ವಿದ್ಯುತ್ ಚಾಲಿತ ಅಡಿಕೆ ಸುಲಿಯುವ ಯಂತ್ರವನ್ನು ತಯಾರಿಸಿದ್ದಾರೆ.ಇದು ಒಂದು ಹೆಚ್.ಪಿ.ಸಾಮರ್ಥ್ಯದ ಸಿಪ್ಪೆ ಸುಲಿಯುವ ಡಿಸ್ಕ್ ಮತ್ತು ಎರಡು ಹೆಚ್.ಪಿ. ಸಾಮರ್ಥ್ಯದ ಸಿಪ್ಪೆ ಹೊರಹಾಕುವ ಬ್ಲೋವರನ್ನು ಒಳಗೊಂಡಿದೆ. ಗಂಟೆಗೆ 40 ಕೆ.ಜಿ. ಸಿಪ್ಪೆ ಸುಲಿಯುವ ಈ ಯಂತ್ರವು ಶೇ.90ರಷ್ಟು ಕಾರ್ಯ ಸಮರ್ಥತೆಯನ್ನು ಹೊಂದಿದೆ. ಇವರ ಈ ಅನುಶೋಧನೆಗೆ ಸಮಾಧಾನಕರ ಬಹುಮಾನ ಲಭಿಸಿದೆ.

ಕೃಷಿ ಸಂಶೋಧನೆಯ ಜನತಾಂತ್ರೀಕರಣದತ್ತ ಮಹತ್ವದ 'ರೈತತೀರ್ಪು'

ಎರಡು ಸಾವಿರದ ಒಂಭತ್ತನೆ ಇಸವಿ ಡಿಸೆಂಬರ್ ಮಾಹೆಯ ಒಂದು, ಎರಡು ಮತ್ತು ಮೂರನೆ ದಿನದಂದು ಬೆಂಗಳೂರಿನ ಬಳಿಯಿರುವ ಫೈರ್‌ಪ್ಲೈಸ್ ಆಶ್ರಮದಲ್ಲಿ ಈ ರೈತತೀರ್ಪು ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಕರ್ನಾಟಕದ ಎಲ್ಲ ಪ್ರದೇಶಗಳನ್ನು, ವರ್ಗಗಳನ್ನು ಪ್ರತಿನಿಧಿಸಿರುವ 30 ಮಂದಿ ಸಣ್ಣ ರೈತರು, ರೈತ ಮಹಿಳೆಯರು, ರೈತ ಕಾರ್ಮಿಕರು ನ್ಯಾಯ ಮಂಡಳಿಯ ಸದಸ್ಯರಾಗಿ ರೈತ ಸಂಶೋಧನೆಗೆ ಸಂಬಂಧಿಸಿದಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಪರಿಣಿತರ ವಾದಗಳನ್ನು ಆಲಿಸಿದರು. ಅವರ ವಾದಗಳನ್ನು ಆಲಿಸಿದ ಮೇಲೆ ದೇಶದ ಸಣ್ಣ, ಅತಿ ಸಣ್ಣ ರೈತರ, ರೈತ ಮಹಿಳೆಯರ, ಕೃಷಿ ಕಾರ್ಮಿಕರ ಹಿತದೃಷ್ಟಿಯಿಂದ ಕೃಷಿ ಸಂಶೋಧನೆಯಲ್ಲಿ ಅನೇಕ ಬದಲಾವಣೆಗಳು ಮತ್ತು ಸುಧಾರಣೆಗಳು ಆಗಬೇಕೆಂದು ತೀವ್ರವಾಗಿ ಅಪೇಕ್ಷಿಸಿದರು. ಈ ಹಿನ್ನೆಲೆಯಲ್ಲಿ ಸರಕಾರ, ನೀತಿನಿರೂಪಕರು, ವಿಶ್ವ ವಿದ್ಯಾಲಯಗಳು, ಕೃಷಿ ವಿಜ್ಞಾನಿಗಳು ಒಟ್ಟಾರೆ ದೇಶದ ಸಣ್ಣ ರೈತರ ಭವಿಷ್ಯದ ಬಗ್ಗೆ ಕಾಳಜಿಯುಳ್ಳ, ಜನಸಮುದಾಯದ ಮುಂದೆ ದಿನಾಂಕ 5.12.2009ರಂದು ಬೆಂಗಳೂರಿನಲ್ಲಿ ಈ ಕೆಳಕಾಣಿಸಿದ ಶಿಫಾರಸುಗಳನ್ನು ಮಂಡಿಸಲಾಯಿತು :

1. ಇಂದಿನ ರೈತ ಸಾಂಪ್ರದಾಯಿಕ ಒಕ್ಕಲುತನಕ್ಕೆ ಹಿಂತಿರುಗಲಾಗದೆ, ದುಬಾರಿ ಆಧುನಿಕ ಕೃಷಿಯನ್ನು ಮಾಡಲಾಗದೇ ಬಿದ್ದು ತೊಳಲಾಡುತ್ತಿದ್ದಾನೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತಪರ ಸಂಶೋಧನೆಗಳ ಅಗತ್ಯವಿದೆ.
2. **ರೈತರ ಅನುಶೋಧನೆಗಳನ್ನು ಗಂಭೀರವಾಗಿ ಪರಿಗಣಿಸಿ, ಸರಕಾರವು ವಿಜ್ಞಾನಿಗಳಿಗೆ ಕೊಡುವಂತೆ ಅನುಶೋಧಕರಿಗೂ ನ್ಯಾಯಯುತ ಸಂಭಾವನೆ ನೀಡಿ ಅಗತ್ಯ ಮನ್ನಣೆ ನೀಡಬೇಕು. ಈ ಅನುಶೋಧನೆಗಳಿಗೆ ಸೂಕ್ತ ಪ್ರಚಾರ ಸಿಗಬೇಕು.**
3. ಪದೇ ಪದೇ ಖರೀದಿಸಿ ತರಬೇಕಾದ ಹಾಗೂ ಹೆಚ್ಚು ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳನ್ನು ಬೇಡುವ ಹೈಬ್ರಿಡ್ ತಳಿ ಸಂಶೋಧನೆಗಳು ಬೇಡ. ಬದಲಿಗೆ ರೈತನೇ ಉತ್ಪಾದಿಸಬಹುದಾದ, ಪರಿಸರಕ್ಕೆ ಹೊಂದಿಕೊಳ್ಳುವ, ಬರನಿರೋಧಕ ಶಕ್ತಿ ಹೊಂದಿರುವ, ಉತ್ತಮವಾದ, ರುಚಿಯಲ್ಲೂ ಮುಂದಿರುವ ಆಹಾರ ಹಾಗೂ ಮೇವು ನೀಡುವ ಜವಾರಿ ತಳಿಗಳ ಮೇಲೆ ಸಂಶೋಧನೆ ನಡೆಯಲಿ.
4. ಸರಕಾರ, ಖಾಸಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಸಹಭಾಗಿತ್ವದಲ್ಲಿ ನಡೆಸುವ ಸಂಶೋಧನೆಯ ಕುರಿತ ಮಾಹಿತಿಯನ್ನು ಪಾರದರ್ಶಕವಾಗಿ ರೈತರು ಪಡೆಯುವಂತಾಗಬೇಕು.
5. ಕೃಷಿ ವಿಶ್ವವಿದ್ಯಾಲಯಗಳು ಹಾಗೂ ಇತರ ಸರಕಾರಿ ಸಂಶೋಧನಾ ಸಂಸ್ಥೆಗಳು ತಾವು ನಡೆಸುವ ಸಂಶೋಧನೆಗಳಲ್ಲಿ ರೈತರ ಸಹಭಾಗಿತ್ವಕ್ಕೆ ಅವಕಾಶ ನೀಡಬೇಕು. ಹಾಗೆಯೇ ಸಂಶೋಧನೆಯ ಲಾಭದಲ್ಲಿ ಸಮಪಾಲು ನೀಡಬೇಕು.
6. ಖಾಸಗಿ/ಬಹುರಾಷ್ಟ್ರೀಯ ಕಂಪನಿಗಳು ರೈತರ ಜಮೀನುಗಳಲ್ಲಿ ಅಥವಾ ತಮ್ಮದೇ ಜಮೀನುಗಳಲ್ಲಿ ಬೀಜೋತ್ಪಾದನೆ/ಪ್ರಯೋಗ ಮಾಡುವಾಗ ರೈತರ ಆರೋಗ್ಯ, ಮಣ್ಣಿನಲ್ಲಾಗುವ ಬದಲಾವಣೆ, ಪರಿಸರದ ಸುತ್ತ ಮುತ್ತಲೂ ಆಗುತ್ತಿರುವ ಪರಿಣಾಮಗಳನ್ನು ಕೃಷಿ ಇಲಾಖೆ ಹಾಗೂ ನಾಗರೀಕ ಗುಂಪುಗಳು (ರೈತರು ಒಳಗೊಂಡಂತೆ) ಪರಿಶೀಲನೆ ಮಾಡಿ, ಈ ಕುರಿತ ಮಾಹಿತಿಯನ್ನು ಪ್ರತಿವರ್ಷ ಮಾಧ್ಯಮಗಳು ಹಾಗೂ ಗ್ರಾಮಸಭೆಗಳ ಮೂಲಕ ರೈತ ಸಮುದಾಯಕ್ಕೆ ತಿಳಿಸಬೇಕು. ವ್ಯತಿರಿಕ್ತ ಪರಿಣಾಮಗಳು ಬಂದಲ್ಲಿ ಆ ಕಂಪನಿಗಳನ್ನೇ ಜಾವಾಬ್ದಾರಿಗಳನ್ನಾಗಿ ಮಾಡಿ, ಹೊಣೆಗಾರರನ್ನಾಗಿ ಮಾಡಬೇಕು.
7. ಪ್ರತಿ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಬೇರೆ ಬೇರೆ ಬೆಳೆಗಳಿಗೆ ಸಂಬಂಧಪಟ್ಟಂತೆ ಸಣ್ಣ ರೈತರ ಜಮೀನಿನಲ್ಲಿ ಇಲಾಖೆಯು ನಡೆಸುವ ಪ್ರಾತ್ಯಕ್ಷಿಕೆಗಳು ಮತ್ತು ರೈತ ಪಾಠಶಾಲೆಗಳು ರಾಜ್ಯವ್ಯಾಪಿ ನಡೆಯುವಂತೆ ವ್ಯವಸ್ಥೆ ಆಗಬೇಕು.
8. ಕೃಷಿ ತಂತ್ರಜ್ಞಾನ ಹಾಗೂ ಸಂಶೋಧನೆ ಕುರಿತ ಮಾಹಿತಿ ರೈತರಿಗೆ ಅರ್ಥವಾಗುವಂತೆ ಸ್ಥಳೀಯ ಭಾಷೆಯಲ್ಲಿ ಸರಳವಾಗಿ ಸಿಗುವಂತಿರಬೇಕು.
9. ಕರ್ನಾಟಕದ ಪ್ರಮುಖ ಬೆಳೆಗಳಲ್ಲೊಂದಾದ ಕಬ್ಬು ಬೆಳೆ ಬಗ್ಗೆ ಸಾಕಷ್ಟು ಸಂಶೋಧನೆ ನಡೆಯುತ್ತಿಲ್ಲ. ಕಬ್ಬು ಬೆಳೆ ಅಭಿವೃದ್ಧಿ ಹಾಗೂ ವ್ಯವಸಾಯದ ಕುರಿತು ಹೆಚ್ಚಿನ ಸಂಶೋಧನೆಗಾಗಿ ಕಬ್ಬು ಸಂಶೋಧನಾ ಕೇಂದ್ರ ಬೇಕು.
10. ನಿರ್ದಿಷ್ಟ ಪ್ರದೇಶದಲ್ಲಿ ನಿಖರವಾಗಿ ಮಳೆಬೀಳುವ, ಬೀಳದಿರುವ ಹಾಗೂ ಅತಿವೃಷ್ಟಿ, ಅನಾವೃಷ್ಟಿ ಆಗುವ ಬಗ್ಗೆ ವೈಜ್ಞಾನಿಕ ಮುನ್ಸೂಚನೆ ಕೊಡುವಂತಾಗಬೇಕು. ಈ ಮಾಹಿತಿ ರೈತರಿಗೂ ಸಿಗುವಂತಾಗಬೇಕು.
11. ನೀರು ಹಾಗೂ ಮಣ್ಣು ಪರೀಕ್ಷೆ ಸೌಲಭ್ಯ ಸಣ್ಣ ರೈತರಿಗೆ ಸುಲಭವಾಗಿ ಸಿಗುವಂತಾಗಲು ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರಗಳು ಬೇಕು.
12. ಹವಾಮಾನ ಆಧಾರಿತ ಬೆಳೆ ವಿಮೆ ಪದ್ಧತಿ ರದ್ದು ಮಾಡಿ ಪ್ರತಿಯೊಂದು ಹೊಲವನ್ನೇ ಒಂದು ಘಟಕವನ್ನಾಗಿ ಮಾಡಿ ಆಗಿರುವ ನಷ್ಟವನ್ನು ಪರಿಶೀಲಿಸಿ ಸೂಕ್ತ ಪರಿಹಾರ ನೀಡುವ ವ್ಯವಸ್ಥೆ ಆಗಬೇಕು.
13. ರೈತ ಸಮುದಾಯದ ಮತ್ತು ಸರಕಾರದ ಸಹಭಾಗಿತ್ವದಲ್ಲಿ ಹೋಬಳಿ ಮಟ್ಟದಲ್ಲಿ ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆಗಾಗಿ ಗುಡಿ ಕೈಗಾರಿಕೆಗಳ ಸ್ಥಾಪನೆ ಮಾಡಬೇಕು. ಗುಡಿ ಕೈಗಾರಿಕೆಗಳು ಸ್ಥಳೀಯ ಸನ್ನಿವೇಶ ಆಧಾರಿತ ಕೃಷಿ ಉತ್ಪನ್ನಗಳಿಗೆ ಜೋಡಣೆ ಆಗಿರಬೇಕು. ಬಂಡವಾಳ ಹೂಡಿಕೆ ಸರಕಾರದ್ದಾಗಿರಬೇಕು.
14. ಗ್ರಾಮಪಂಚಾಯತ್ ಮಟ್ಟದಲ್ಲಿ ದೇಸಿ ಬೀಜಬ್ಯಾಂಕ್ ಸ್ಥಾಪನೆ ಹಾಗೂ ಅವುಗಳ ಮೂಲಕ ಬೀಜಗಳ ವಿತರಣೆ, ಬೀಜಮೇಳ, ಪ್ರಾತ್ಯಕ್ಷಿಕೆ, ತಳಿ ಅಭಿವೃದ್ಧಿ ಮುಂತಾದ ಕಾರ್ಯಕ್ರಮಗಳು ನಡೆಯಬೇಕು.
15. ರೈತವಿರೋಧಿಯಾದ ಬೀಜ ಕಾನೂನುಗಳು ಬೇಡ.
16. ದೇಶದ ಜನಸಂಖ್ಯೆಯಲ್ಲಿ ಎಪ್ಪತ್ತು ಪ್ರತಿಶತ ಇರುವ, ಒಟ್ಟಾರೆ ಆರ್ಥಿಕ ವ್ಯವಸ್ಥೆಗೆ ಬಹುಮುಖ್ಯ ಕೊಡುಗೆ ನೀಡುವ ಕೃಷಿರಂಗಕ್ಕೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರತ್ಯೇಕವಾದ ಆಯವ್ಯಯ ಮಂಡಿಸಬೇಕು.
17. ದನಕರು, ಕುರಿಗಳಿಗೆ ಮೇಯಿಸಲು ಮೀಸಲಾಗಿಟ್ಟಿದ್ದ ಗೋಮಾಳಗಳು ಹಾಗೂ ಕೆರೆಗಳು ಈಗ ಇಲ್ಲವಾಗಿವೆ. ಅವು ಮತ್ತೆ ಸಮುದಾಯಕ್ಕೆ ಲಭ್ಯವಾಗುವಂತೆ ಮಾಡಬೇಕು.
18. ಹೊಸತಲೆಮಾರಿನ ಮಕ್ಕಳಿಗೆ ಕೃಷಿ ಬದುಕಿನ ಬಗ್ಗೆ ಆಸಕ್ತಿ ಹುಟ್ಟಿಸಲು, ವಿವರ ತಿಳಿಯುವಂತಾಗಲು ಶಾಲಾ ಪಠ್ಯದಲ್ಲಿ ಕೃಷಿ ವಿಷಯವನ್ನೂ ಅಳವಡಿಸಬೇಕು.
19. ವಿಶೇಷ ವಿತ್ತವಲಯ ಹಾಗೂ ಅಭಿವೃದ್ಧಿಯ ನೆಪದಲ್ಲಿ ಕೃಷಿಭೂಮಿಯನ್ನು ರೈತರಿಂದ ಕಿತ್ತುಕೊಳ್ಳಬಾರದು.
20. ಅರಣ್ಯ ಇಲಾಖೆ ತನ್ನ ಭೂಮಿಯಲ್ಲಿ ಅಕೇಶಿಯಾ, ನೀಲಗಿರಿ ಮುಂತಾದ ಗಿಡಗಳನ್ನು ರೈತರಿಗೆ ಉಚಿತವಾಗಿ ಹಂಚುವುದನ್ನು ನಿಲ್ಲಿಸಬೇಕು. ಅಂತರ್ಜಲ ಮಟ್ಟ ಕುಸಿಯಲು ಕಾರಣವಾದ, ಪರಿಸರಕ್ಕೆ ಮಾರಕವಾದ ಇವನ್ನು ಏಕಬೆಳೆಯಾಗಿ ನೆಡುವ ಬದಲು ನೆಲ-ಜಲ ಸಂರಕ್ಷಿಸುವ, ಪರಿಸರಕ್ಕೆ ಹಾಗೂ ಪ್ರಾಣಿ, ಪಕ್ಷಿ, ಮನುಷ್ಯರಿಗೆ ಅಗತ್ಯವಿರುವ ಗಿಡ ಮರಗಳನ್ನು ಬೆಳೆಸಬೇಕು.
21. ಕೃಷಿನೀತಿಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಸಣ್ಣ ರೈತರು, ಕೃಷಿ ಕಾರ್ಮಿಕರು, ಬಡಗಿ, ಕುಂಬಾರ ಇತ್ಯಾದಿ ಕೃಷಿಗೆ ಪೂರಕ ಉದ್ಯಮಗಳ ಸಮುದಾಯಗಳನ್ನು ಸೇರಿಸಿಕೊಂಡು ಸನ್ನಿವೇಶಾಧಾರಿತ ಕೃಷಿ ನೀತಿಯನ್ನು ರೂಪಿಸಬೇಕು.
22. ಕರ್ನಾಟಕ ಕುರಿ ಅಭಿವೃದ್ಧಿ ಮಂಡಳಿಯಲ್ಲಿ ಹಾಗೂ ನೀತಿನಿರೂಪಣೆಯಲ್ಲಿ ಕುರಿಗಾಹಿಗಳಿಗೆ ಪ್ರಾತಿನಿಧ್ಯ ಬೇಕು.

****

ನ್ಯಾಯಮಂಡಳಿಯ ಸದಸ್ಯರು: *1.ಸಾಮವ್ವ 2.ಶೋಭಾವತಿ ತುಗಾವೆ 3. ಮಾರುತಿ ಕಾಂಬ್ಳೆ 4.ಲಕ್ಷ್ಮೀಬಾಯಿ ಕಾಂಬ್ಳೆ 5.ಅಜ್ಜಮ್ಮ ಇಲ್ಲೆಪ್ಪನವರ್ 6. ರುದ್ರಪ್ಪ ಜುಲಾಫಿ 7.ಸದಾಶಿವಯ್ಯ 8.ಈರಯ್ಯ ಕಿಲ್ಲೇದಾರ 9.ಮಾರುತಿ ಹೊಸಮನಿ 10.ಜಯತಾನುಬಿ ಪೀರ್‌ಸಾಬ್ ನದಾಫ್ 11.ದಾವಲ್ ಸಾಬ್ 12.ಶಿವಗಂಗಮ್ಮ 13.ಎಮ್.ಟಿ.ಶಾಂತಿಮೂಲೆ 14.ಹೊಯ್ಸಳ ಎಸ್.ಅಪ್ಪಾಜಿ 15.ಎಸ್. ಎಂ. ಗುರುಲಿಂಗಯ್ಯ 16. ಲಲಿತಾ ಜಿ.ಭಟ್ 17. ಚಿತ್ತಪ್ಪ 18. ಚಿಕ್ಕಬೋರೇಗೌಡ 19.ಲಕ್ಷ್ಮಮ್ಮ 20. ಹೊಂಬಯ್ಯ 21. ಸಿದ್ದರಾಜಪ್ಪ 22. ಕಲ್ಲಪ್ಪ ಹಕ್ಕದ್ 23. ಮುನಿಯಮ್ಮ 24. ತಳವಾರ ಅಜ್ಜಪ್ಪ 25. ಹೇಮವ್ವ ಲಮಾಣಿ 26. ಶಿವಮ್ಮ ಆರ್. 27. ಗಂಗಮ್ಮ 28. ಲಕ್ಷ್ಮಿ ಸಿದ್ದಿ 29. ಲಲಿತವ್ವ 30. ಹಟ್ಟಿಕೆಗೌಡ*

ಹಿತ್ತಲಗಿಡದ ಚಂದಾ ವಿವರ

ವಿಂಗಡಣೆ	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/–	ರೂ.400/–
ರೈತರು	ರೂ.60/–	ರೂ.500/–
ಇತರರು	ರೂ.75/–	ರೂ.600/–
ಸಂಸ್ಥೆಗಳು	ರೂ.350/–	ರೂ.2500/–
ಪೋಷಕರು	ರೂ.5000/– ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ ಪೋಷಕರ ವಂತಿಕೆ ಪಡೆಯಲಾಗುವುದು)

ಚಂದಾ ಹಣವನ್ನು ಅಂಚೆ (M.O.) ಅಥವಾ '*ಸಂಪಾದಕರು, ಹಿತ್ತಲಗಿಡ, ಬೆಂಗಳೂರು*' ಈ ಹೆಸರಿನ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

Subscription Rates for *Honey Bee*

Category	South Asia* (Indian Rs.)	International (US $ Dollar)
Annual		
Individual	150	30
Supporter	500	50
Institution / Library	2,500	200
Life (15 Years)		
Individual	2,500	500
Institution / Library	10,000	1,000
Other Publications		
Spirit of Sustaninability	50	10
Nature Heals	150	20
Profiles of Innovators	175	25
Back issues of *Honey Bee*	**(1990-2003)**	
Hard Copies (Postage Extra)	1, 500 Individual	50
	5,000 Institution	200
CD	250 Individual	20
	1,000 Institution	60

* *Includes : India, Nepal, Bhutan, Bangladesh, Pakistan, Sri Lanka and the Maldives.*

Please send your contributions through bank draft/cheque in favour of **A/c Sristi Innovations** at the editorial address; C/o Prof Anil K Gupta, Editor, *Honey Bee*, Indian Institute of Management, Vastrapur, Ahmedabad- 380 015 India. Phone : 91-79-26324927,
Email : honeybee@sristi.org;

Printed by M/s Replica Offset Printers, Industrial Town, Rajajinagar, Bangalore - 560 044
Published by Sri K. G. Priyadarshi (Owner) at No.399, 14-B Cross, New Town Yelahanka, Bangalore-560 106,
Edited by Dr. T.N. Prakash Kammaradi

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ
ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)
ರಾಷ್ಟ್ರೀಯ ಮಟ್ಟದ ಏಳನೆ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ **(Department of Science and Technology)** ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು **(Intellectual Property Rights)** ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 10,000 ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ವ್ಯಕ್ತಿ ಹಾಗು ಸಂಸ್ಥೆಗಳಿಗೆ 50,000, 25,000 ಮತ್ತು 10,000ಗಳ ಮೂರು ವಿಶೇಷ ಬಹುಮಾನಗಳಿವೆ. ಹಾಗೇ, ರಾಜ್ಯ ಮಟ್ಟದಲ್ಲೂ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು **ರಾಷ್ಟ್ರೀಯ ದಾಖಲಾತಿ ಪುಸ್ತಕ** (National Register)ದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸ ಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಮಾಡುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ. ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯೀಕರಣಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು **'ಪೂರ್ವ ಸೂಚಿತ ಸಮ್ಮತಿ'** (Prior Informed Consent) ಪಡೆದ ನಂತರವೇ ಮುಂದುವರೆಯಲಾಗುವುದು.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಿಕೊಡಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡುತ್ತಿದ್ದಾರೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ , ಫೋಟೋಗಳನ್ನು, ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ಏಳನೆ ಸ್ಪರ್ಧೆಗೆ ಡಿಸೆಂಬರ್ 2010ರವರೆಗೆ ಅವಕಾಶವಿದೆ. ಅನುಶೋಧನೆಗಳನ್ನು 'ಹಿತ್ತಲಗಿಡ' ಅಥವಾ National Coordinator, National Innovation Foundation, Bungalow No.1 Satellite Complex, Permchand Nagar Road, Ahmedabad - 380015 Gujarat. e-mail : campaign@nifindia.org ಇಲ್ಲಿಗೆ ಕಳುಹಿಸಬಹುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ತೆರೆದ ಅಂಚೆ

ಗೆ, ...

ವಿಳಾಸ

ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಪ್ರಾಧ್ಯಾಪಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065
Ph: 080-23620025
email: prakashtnk@yahoo.com